# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 • ಸಂಚಿಕೆ:288 • ನೋಂದಣಿ ಸಂ.:KARKAN27911 • ವಿಜಯನಗರ • 14.04.2024 • ಭಾನುವಾರ • ಪುಟ:04 • ಬೆಲೆ:2

Volume:01 • Issue:288 • Reg.No:KARKAN27911 • VIJAYANAGARA • 14.04.2024 • Sunday • Page:04 • Rs:2


## ನಮ್ಮ ನಡೆ ಮತದಾನದ ಕಡೆ । ಮೇ 7 ನೆನಪಿರಲಿ

**ಮೈಕ್ರೋ ನ್ಯೂಸ್**


**ಸುದ್ದಿ, ಜಾಹೀರಾತು ಕಚೇರಿ**

ವಿಜಯನಗರ ಜಿಲ್ಲೆಯ ಸಾರ್ವಜನಿಕ ಸುದ್ದಿ ಪ್ರಕಟಣೆಗಳ ಮಾಹಿತಿ ಪ್ರತಿಗಳನ್ನು ನೇರವಾಗಿ ಈ ಕೆಳಗಿನ ಕಚೇರಿ ವಿಳಾಸಕ್ಕೆ ತಲುಪಿಸಲು ಕೋರಿದೆ.

**ಹಂಪಿ ಟೈಮ್ಸ್**

ಬಂಬೂ ಬಜಾರ್, ವಾಲ್ಮೀಕಿ ಸರ್ಕಲ್ ಹತ್ತಿರ,
ಹೊಸಪೇಟೆ, ವಿಜಯನಗರ ಜಿಲ್ಲೆ.
ಮೊ: 94486 33038
Email: hampitimes@gmail.com


## ಲೋಕಸಭಾ ಚುನಾವಣೆ ಚುನಾವಣಾ ವೆಚ್ಚ ವೀಕ್ಷಕರ ನೇಮಕ

**ಹಂಪಿ ಟೈಮ್ಸ್ ಹೊಸಪೇಟೆ**

ಲೋಕಸಭಾ ಚುನಾವಣೆ–2024ರ ಹಿನ್ನೆಲೆಯಲ್ಲಿ ಭಾರತ ಚುನಾವಣಾ ಆಯೋಗವು ಇಬ್ಬರು ಚುನಾವಣಾ ವೆಚ್ಚದ ವೀಕ್ಷಕರನ್ನು ನಿಯೋಜಿಸಿದೆ.

ವಿಜಯನಗರ ಜಿಲ್ಲೆಯ ಹಡಗಲಿ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ ವಿಧಾನಸಭಾ ಕ್ಷೇತ್ರ ಮತ್ತು ಬಳ್ಳಾರಿ ಜಿಲ್ಲೆಯ ಸಂಡೂರ ವಿಧಾನಸಭಾ ಕ್ಷೇತ್ರಗಳಿಗೆ ಐಆರ್‌ಎಸ್ ಅಧಿಕಾರಿ ಸುರೇಂದ್ರ ಪೌಲ್ ಕೆ ಮೊ:9141086852 ಅವರು ಚುನಾವಣಾ ವೆಚ್ಚದ ವೀಕ್ಷಕರಾಗಿದ್ದಾರೆ. ಬಳ್ಳಾರಿ ಜಿಲ್ಲೆಯ ಕಂಪ್ಲಿ, ಬಳ್ಳಾರಿ ಗ್ರಾಮಾಂತರ, ಬಳ್ಳಾರಿ ನಗರ ಮತ್ತು ವಿಜಯನಗರ ಜಿಲ್ಲೆಯ ವಿಜಯನಗರ ವಿಧಾನಸಭಾ ಕ್ಷೇತ್ರಗಳಿಗೆ ಐಆರ್‌ಎಸ್ ಅಧಿಕಾರಿ ಕೆ.ಕೃಷ್ಣಮೂರ್ತಿ ಮೊ:9141086851 ಅವರು ಚುನಾವಣಾ ವೆಚ್ಚದ ವೀಕ್ಷಕರಾಗಿದ್ದಾರೆ. ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದಂತೆ ಏನಾದರು ದೂರುಗಳು ಇದ್ದಲ್ಲಿ ಸಾರ್ವಜನಿಕರು ಆಯಾ ವಿಧಾನಸಭಾ ಕ್ಷೇತ್ರಗಳ ಈ ಚುನಾವಣಾ ವೆಚ್ಚದ ವೀಕ್ಷಕರನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಡಿಸಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ.

### ತಂದೆ ತಾಯಿಗಳನ್ನು ನೋಡುವ ದೃಷ್ಟಿಕೋನ ಬದಲಾಯಿಸಿದ ಇತ್ತೀಚಿನ ಶಿಕ್ಷಣ

## ಅಕ್ಷರ ಕಲಿತವರ ಸಂಖ್ಯೆ ಅಧಿಕ ಬುದ್ಧಿವಂತರಿಗಾಗಿ ತಪ್ಪದ ಹುಡುಕಾಟ

### ಮಲ್ಲಿಕಾರ್ಜುನ ಶ್ರೀ ಅಭಿಮತ । ಶಿಕ್ಷಣದಲ್ಲಿ ಮಾನವೀಯ ಮೌಲ್ಯಗಳನ್ನು ಕಲಿಸಿ ಹಿಂದಿನ ಮಠ ಮಾನ್ಯಗಳಲ್ಲಿತ್ತು ಸಂಸ್ಕಾರ, ಸಂಸ್ಕೃತಿ, ಮೌಲ್ಯಯುತ ಶಿಕ್ಷಣ



**ಹಂಪಿ ಟೈಮ್ಸ್ ಕೊಟ್ಟೂರು**

ಪ್ರಸ್ತುತ ದಿನಗಳಲ್ಲಿ ಮಕ್ಕಳಿಗೆ ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳನ್ನು ಕಲಿಸುವಂತಹದ್ದು ಶಿಕ್ಷಕರ ಪ್ರಮುಖ ಜವಾಬ್ದಾರಿಯಾಗಿದೆ ಎಂದು ಶಿವಮೊಗ್ಗದ ಶ್ರೀ ಬೆಕ್ಕಿನ ಕಲ್ಮಠದ ಮಹಾರಾಜ ನಿರಂಜನ ಜಗದ್ಗುರು ಮಲ್ಲಿಕಾರ್ಜುನ ಶ್ರೀ ಹೇಳಿದರು.

ಪಟ್ಟಣದ ಮಹದೇವ ಇಂಟರ್ ನ್ಯಾಷನಲ್ ಶಾಲೆ ಮತ್ತು ವಿಜ್ಞಾನ ಹಾಗೂ ವಾಣಿಜ್ಯ ಪಿಯು ಕಾಲೇಜ್ ನಲ್ಲಿ ನಡೆದ ವಿಘ್ನೇಶ್ವರ,ಸರಸ್ವತಿ ವಿಗ್ರಹಗಳ ಪ್ರಾಣ ಪ್ರತಿಷ್ಠಾಪನೆ ಮತ್ತು ವೈಭವ ಲಕ್ಷ್ಮಿ ಪೂಜಾ ಹಾಗೂ ಶಾಲೆಯ ಈಜುಕೊಳ ಉದ್ಘಾಟನಾ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದರು.

ಹಿಂದೆ ಸಂಸ್ಕಾರಯುತ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತಂದಂತವು ಮಠಮಾನ್ಯಗಳು ತದನಂತರ ಈ ಕಾರ್ಯವಿಸ್ತಾರಗೊಂಡು ಶಿಕ್ಷಣದಲ್ಲಿ ದೊಡ್ಡ ಕ್ರಾಂತಿಯೇ ಉಂಟಾಯಿತು.

ಇತ್ತೀಚೆಗೆ ಶಿಕ್ಷಣದಲ್ಲಿ ಕಲಿಕೆಗೆ, ಅಂಕಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿರುವುದರಿಂದ, ಶಿಕ್ಷಣ ವಂತರ ಸಂಖ್ಯೆ ಹೆಚ್ಚಿದ್ದು, ಬುದ್ದಿವಂತರ ಸಂಖ್ಯೆ ಕಡಿಮೆಯಾಗಿ, ಮಾನವೀಯ ಮೌಲ್ಯಗಳಿಲ್ಲದೆ ತಂದೆ ತಾಯಿಗಳನ್ನು ನೋಡುವ ದೃಷ್ಟಿಕೋನ ಬೇರೆಯಾಗಿದೆ.

ಈ ಹಿನ್ನೆಲೆ ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಶಿಕ್ಷಣ ಕಲಿಸುವ ಹೊಣೆ ಶಿಕ್ಷಕರದ್ದು, ಜೊತೆಗೆ ತಂದೆ ತಾಯಿಗಳನ್ನು ನೋಡಿಕೊಳ್ಳುವ ಮತ್ತು ಸಂಸ್ಕಾರ,ಸಂಸ್ಕೃತಿ ಶಿಕ್ಷಣವನ್ನು ಶಿಕ್ಷಕರು ಹೇಳಿಕೊಡಬೇಕೆಂದರು.

ಮಹಾದೇವ ಟ್ರಸ್ಟ್ ನ ಆಡಳಿತಾಧಿಕಾರಿ ಬಸಾಪುರದ ಪಂಪಾಪತಿ ಪ್ರಾಸ್ತಾವಿಕವಾಗಿ ಮಾತನಾಡಿ, ಉತ್ತಮ ಶಿಕ್ಷಣ, ಸಂಸ್ಕಾರ, ಸಂಸ್ಕೃತಿ ನೀಡುವ ದೃಷ್ಟಿಯಿಂದ ಮಹದೇವ ತಾತನವರ ಆಶಿರ್ವಾದಿ ಪ್ರಾರಂಭವಾದ ಈ ಶಿಕ್ಷಣ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದಿದೆ ಎಂದು ಹೇಳಿದರು.

ಹಂಪಸಾಗರದ ನವಲಿ ಹಿರೆ ಮಠದ ಶ್ರೀ ಅಭಿನವ ಶಿವಲಿಂಗೇಶ್ವರ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಹೂವಿನಹಡಗಲಿ ಮ.ನಿ.ಪ್ರ.ಡಾ.ಹಿರಿಶಾಂತವೀರ ಸ್ವಾಮಿಗಳು ಮಾತನಾಡಿದರು, ಶಿವಮೊಗ್ಗದ ನಿವೃತ್ತ ಉಪನ್ಯಾಸಕಿ ಕಿರಣ್ ರವೀಂದ್ರ ದೇಸಾಯಿ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಮರಿಯಮ್ಮನಹಳ್ಳಿ ಗುರುಪಾದ ದೇವರ ಮಠದ ಮಲ್ಲಿಕಾರ್ಜುನ ಶಿವಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು, ಕೊಟ್ಟೂರು ಕ್ರಿಯಾ ಮೂರ್ತಿಗಳು, ಶ್ರೀ ಗುರು ಕೊಟ್ಟೂರೇಶ್ವರ ಮಹಲ್ ಮಠದ ಶಂಕರಸ್ವಾಮಿಗಳು ಉದ್ಘಾಟನೆ ನೆರವೇರಿಸಿದರು.

ಕೊಟ್ಟೂರಿನ ಡೋಣೂರು ಚಾನುಕೋಟಿ ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಕೊಟ್ಟೂರು ದೇವರು ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ಕ್ರಿಯಾ ಮೂರ್ತಿಗಳು ಮ.ನಿ.ಪ್ರ ಶಿವಪ್ರಕಾಶ್ ಸ್ವಾಮಿಗಳು, ಪ್ರಾಚಾರ್ಯರಾದ ಎನ್.ಸಿ ಹವಾಲ್ದಾರ್ ಮತ್ತು ಎಸ್.ಎಸ್ ಪಾಟೀಲ್ ಸೇರಿದಂತೆ ಇತರ ಗಣ್ಯರು ಉಪಸ್ಥಿತರಿದ್ದರು. ಬಸಾಪುರದ ಅರವಿಂದ ಸ್ವಾಗತಿಸಿದರು, ಶಿವಮೊಗ್ಗದ ಶಾಂತಾ ಆನಂದ ನಿರೂಪಿಸಿದರು, ಬಳ್ಳಾರಿ ಮೆಣಸಗಿ ಬಸವರಾಜೇಶ್ವರಿ ವಂದಿಸಿದರು.

## ಕೇಂದ್ರದತ್ತ ಬೊಟ್ಟು ಮಾಡೋರು ಸಿಎಂ ಯಾಕ ಆಗಿದಿರಿ?

### ಸುದ್ದಿಗೋಷ್ಠಿಯಲ್ಲಿ ಕೈ ಸರ್ಕಾರದ ವಿರುದ್ಧ ಹರಿಹಾಯ್ದ ರೈತ ಮೋರ್ಚಾ ರಾಜ್ಯಾಧ್ಯಕ್ಷ ಎ.ಎಸ್. ಪಾಟೀಲ್ ನಡಹಳ್ಳಿ



**ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯದಲ್ಲಿ ರೈತರ ಸ್ಥಿತಿ ಚಿಂತಾಜನಕವಾಗಿದ್ದರೂ, ರೈತರ ನೆರವಿಗೆ ಧಾವಿಸದೆ, ಸರ್ಕಾರ ಕೇಂದ್ರ ಸರ್ಕಾರವನ್ನು ದೂರುವುದೇ ರಾಜ್ಯ ಸರ್ಕಾರ ಕೆಲಸವಾಗಿದೆ ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ ಎ.ಎಸ್. ಪಾಟೀಲ್ ನಡಹಳ್ಳಿ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ದೇಶದ ರಕ್ಷಣೆಗಾಗಿ ಮೋದಿ ಮತ್ತೊಮ್ಮೆ ಎಂದು ಜನರು ತೀರ್ಮಾನಿಸಿದ್ದಾರೆ. ಶ್ರೀರಾಮುಲು 2 ಲಕ್ಷಕ್ಕೂ ಅಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ. ಬರಗಾಲ ನಿರ್ವಹಣೆ ಮಾಡಲಾಗದೆ ಬರೀ ಕೇಂದ್ರದ ಮೇಲೆ ಬೊಟ್ಟು ಮಾಡೋರು ಸಿಎಂ ಯಾಕ ಆಗಿದಿರಿ? ಎಂದ ಅವರು, ಬಿಜೆಪಿ ಜಾರಿಗೆ ತಂದಿದ್ದ ವಿದ್ಯಾಸಿರಿ ಸೇರಿದಂತೆ ಅನೇಕ ಜನಪರ ಯೋಜನೆಗಳನ್ನು ಕಾಂಗ್ರೆಸ್ ಸರ್ಕಾರ ನಿಲ್ಲಿಸಿದೆ. ಕಾಂಗ್ರೆಸ್ ಸರ್ಕಾರ ರೈತವಿರೋಧಿ ಸರ್ಕಾರವಾಗಿದೆ ಎಂಬುದಕ್ಕೆ ಬರಗಾಲದ ಹಣವನ್ನು ರೈತರಿಗೆ ಇದೂವರೆಗೂ ನೀಡಿಲ್ಲ. ಸಕಾಲದೊಳಗೆ ಕೇಂದ್ರ ಸರ್ಕಾರಕ್ಕೆ ಮಾಹಿತಿ ನೀಡುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ರೈತರಿಗೆ ಉಚಿತ ವಿದ್ಯುತ್ ದೊರೆಯುತ್ತಿತ್ತು, ಇದೀಗ ವಿದ್ಯುತ್ ಸಂಪರ್ಕ ಪಡೆಯಲು ರೈತರು 2 ರಿಂದ 3 ಲಕ್ಷ ರೂ ಸಾಲಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಹೈನುಗಾರಿಕೆ ಪ್ರೋತ್ಸಾಹಿಸಲು ಲೀಟರಿಗೆ 5 ರೂಗಳನ್ನು ರೈತರ ಖಾತೆಗೆ ಹಾಕುತ್ತಿದ್ದುದನ್ನು ಕಾಂಗ್ರೆಸ್ ಸರ್ಕಾರ ಸ್ಥಗಿತಗೊಳಿಸಿದೆ. ರೈತರಿಗೆ ಅನುಕೂಲವಾಗುವ ಯಾವುದೇ ಯೋಜನೆ ಬಜೆಟ್‌ನಲ್ಲಿ ಮಂಡಿಸಿಲ್ಲ. ಬರಗಾಲದಲ್ಲಿ ಗೋಶಾಲೆಗಳನ್ನು ತೆರೆದು ರೈತರಿಗೆ ನೆರವಾಗುವ ಬದಲಿಗೆ ಕಾಂಗ್ರೆಸ್ಸಿಗರು ಮಾತಲ್ಲೇ ರಾಜಕೀಯ ಮಾಡುತ್ತಿದ್ದಾರೆ. ಮೇವು ನೀಡಬೇಕೆಂದು ಆದೇಶ ಮಾಡಿದ್ದಾರಷ್ಟೇ ಆದರೆ ಅದು ರೈತರ ಬೇಡಿಕೆಗೆ ತಕ್ಕಂತೆ ನೀಡುತ್ತಿಲ್ಲ. ವಾರಕೊಂದಿಷ್ಟು ಎನ್ನುವಂತೆ ಮೇವು ನೀಡುತ್ತಿದ್ದಾರೆ. ರೈತರ ಖಾತೆಗೆ ಕೇಂದ್ರ ಸರ್ಕಾರದಿಂದ 6 ಸಾವಿರ ರೂಗಳನ್ನು ಹಾಕಲಾಗುತ್ತಿದೆ. ಬಿಎಸ್‌ವೈ ಸಿಎಂ ಇದ್ದಾಗ ರೈತರ ಖಾತೆಗೆ 4 ಸಾವಿರ ರೂಗಳನ್ನು ಹಾಕುತ್ತಿದ್ದರು. ಈಗ ಕಾಂಗ್ರೆಸ್ಸಿನವರು ಸ್ಥಗಿತಗೊಳಿಸಿದ್ದಾರೆ. ಕೇಂದ್ರದ ಪಾಲು ಕೇಳುವುದು ತಪ್ಪಲ್ಲ ಆದರೆ ಸಕಾಲದೊಳಗೆ ನಿಯಮಾನುಸಾರ ಕೇಳವುದು ಕಾಂಗ್ರೆಸ್ಸಿಗೆ ಗೊತ್ತಿಲ್ಲ. ಕರ್ನಾಟಕದ ಸಿಎಂ ಮಾತ್ರ ದೂರುತ್ತಿದ್ದಾರೆ. ಇತರೆ ರಾಜ್ಯಗಳಿಂದ ಯಾವುದೇ ದೂರುಗಳಿಲ್ಲ ಎಂದು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಹರಿಹಾಯ್ದರು.

ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳು ರೈತರಿಗೆ ಸ್ವಾತಂತ್ರ್ಯ ಮತ್ತು ಕೃಷಿಯನ್ನು ಕೈಗಾರಿಕೆಯನ್ನಾಗಿ ಮಾಡುವ ಉದ್ದೇಶದಿಂದ ಕೂಡಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಉಪಾಧ್ಯಕ್ಷ ಗುರುಲಿಂಗನಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್, ಪ್ರಧಾನ ಕಾರ್ಯದರ್ಶಿ ಸಂಜೀವರೆಡ್ಡಿ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಎಚ್.ರೇವಣ್ಣ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಕೊಟ್ರೇಶ್ ಕಿಚಿಡಿ, ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಬಿ. ಶಂಕರಾನಂದ, ಜಿಲ್ಲಾ ಮಾಧ್ಯಮ ಸಂಚಾಲಕ ಬಸವರಾಜ ಕರ್ಕಿಹಳ್ಳಿ, ಅನುರಾಧಾ, ಮಂಡಲ ಅಧ್ಯಕ್ಷ ಶಂಕರ್ ಮೇಟಿ ಇತರರಿದ್ದರು.



ಹೊಸಪೇಟೆಯಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀರಾಮುಲು ಶನಿವಾರ ಪ್ರಚಾರ ಆರಂಭಿಸಿದರು.






### ಗೃಹರಕ್ಷಕ ಶಿಬಿರಾರ್ಥಿಗಳಿಂದ

## ಮತದಾನ ಪ್ರತಿಜ್ಞೆ

### ಮತದಾನ ಪ್ರಜೆಯ ಆದ್ಯ ಕರ್ತವ್ಯ ಎಂದ ಜಿಪಂ ಸಿಇಒ ಸದಾಶಿವಪ್ರಭು



**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ, ಜಿಲ್ಲಾ ಗೃಹರಕ್ಷಕ ದಳ ಹಾಗೂ ಹೊಸಪೇಟೆ ತಾಲೂಕು ಸ್ವೀಪ್ ಸಮಿತಿ ಮತ್ತು ನಗರಸಭೆಯಿಂದ ಏಪ್ರೀಲ್ 13ರಂದು ಮತದಾನ ಜಾಗೃತಿ ನಡೆಯಿತು.

ಹೊಸಪೇಟೆ ನಗರದ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸದಾಶಿವ ಪ್ರಭು ಬಿ ಅವರು ಚಾಲನೆ ನೀಡಿ ಮಾತನಾಡಿ, ಮತದಾನ ಮಾಡುವುದು ಪ್ರತಿಯೊಬ್ಬ ಪ್ರಜೆಯ ಆದ್ಯ ಕರ್ತವ್ಯ ಎಂದು ಭಾವಿಸಿ ತಪ್ಪದೇ ಮತದಾನ ಮಾಡಬೇಕು. ಮತದಾನ ದಿನದಂದು ಎಂತಹದ್ದೇ ಕಾರ್ಯವಿದ್ದರೂ ಅದರ ಮಧ್ಯೆ ಬಿಡುವು ಮಾಡಿಕೊಂಡು ಮತಗಟ್ಟೆಗೆ ತೆರಳಿ ಮತದಾನ ಮಾಡುವುದನ್ನು ಯಾರು ಸಹ ಮರೆಯಬಾರದು ಎಂದು ತಿಳಿಸಿದರು. ವಿಜಯನಗರ ಜಿಲ್ಲೆಯು ಮತದಾನದ ಶೇಕಡವಾರು ಪ್ರಮಾಣದಲ್ಲಿ ಉತ್ತಮ ಸ್ಥಾನ ಕಾಯ್ದುಕೊಳ್ಳಬೇಕು. ಈ ನಿಟ್ಟಿನಲ್ಲಿ ಅರ್ಹವಿರುವ ಪ್ರತಿಯೊಬ್ಬರು ತಪ್ಪದೇ ಮತದಾನ ಮಾಡಬೇಕು ಎಂದು ತಿಳಿಸಿದರು.

ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಗಳಾದ ಸಲೀಂ ಪಾಷಾ ಮಾತನಾಡಿ, ನಾನು ಮತದಾನ ದಿನದಂದು ಕಡ್ಡಾಯ ಮತದಾನ ಮಾಡುತ್ತೇನೆ ಎನ್ನುವ ಸಂಕಲ್ಪ ಹೊಂದಿ ಪ್ರತಿಯೊಬ್ಬರು ಮತದಾನ ಮಾಡುವುದನ್ನು ಮರೆಯಬಾರದು ಎಂದು ತಿಳಿಸಿದರು.

ಗೃಹರಕ್ಷಕ ದಳದ ಜಿಲ್ಲಾ ಸಮಾದೇಷ್ಟರಾದ ಬಸವರಾಜ್ ಅಗಸರ ಪ್ರತಿಜ್ಞಾವಿಧಿ ಬೋಧಿಸಿದರು. ಈ ಸಂದರ್ಭದಲ್ಲಿ ಗೃಹರಕ್ಷಕ ದಳದ ಜಿಲ್ಲಾ ಬೋಧಕರಾದ ಪ್ರಶಾಂತ್, ತಾಲೂಕು ಪಂಚಾಯಿತಿ ಹೊಸಪೇಟೆಯ ಐಇಸಿ ಸಂಯೋಜಕರಾದ ಹೆಚ್.ನಾಗರಾಜ್, ಘಟಕ ಅಧಿಕಾರಿ ಎಸ್ ಎಂ. ಗಿರೀಶ್, ಪ್ಲಾಟೂನ್ ಕಮಾಂಡರ್ ಎಲ್ .ವಾಲ್ಯಾ ನಾಯ್ಕ ಹಾಗೂ ಗೃಹ ರಕ್ಷಕದಳದ ಶಿಭಿರಾರ್ಥಿಗಳು ಉಪಸ್ಥಿತರಿದ್ದರು.







# ಹಂಪಿ ಟೈಮ್ಸ್ ಸಂಪಾದಕೀಯ

## ಮೃತ್ಯುಂಜಯನಾದ ಸಾತ್ವಿಕ್ ಘಟನೆ ಮರುಕಳಿಸದಿರಲಿ

ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಲಚ್ಯಾಣ ಗ್ರಾಮದಲ್ಲಿ ಕೊಳವೆಬಾವಿಗೆ ಮಗು ಬಿದ್ದ ಪ್ರಕರಣ ರಾಜ್ಯದಲ್ಲಿ ಇದೇ ಮೊದಲಲ್ಲ. ಆದರೆ, ಇದೇ ಕೊನೆ ಪ್ರಕರಣ ಆಗಲಿ ಎಂಬುದು ನಮ್ಮ ಆಶಯ. ಇದಕ್ಕೆ ಸರ್ಕಾರದ ಕಠಿಣ ನಿಯಮಗಳು ಅಷ್ಟೇ ಸಾಕಾಗುವುದಿಲ್ಲ. ಇದರೊಂದಿಗೆ ಕೊಳವೆಬಾವಿ ತೋಡಿಸಿದವರ ಇಚ್ಛಾಶಕ್ತಿಯೂ ಅತ್ಯಗತ್ಯ. ವಿಜಯಪುರ ಜಿಲ್ಲೆ ಇಂಡಿ ತಾಲೂಕಿನ ಲಚ್ಯಾಣ ಗ್ರಾಮದಲ್ಲಿ ಸತೀಶ್–ಪೂಜಾ ದಂಪತಿ ಇದ್ದಾರೆ. ಅವರು ತಮ್ಮ ನಾಲ್ಕು ಎಕರೆ ಜಮೀನಿನಲ್ಲಿ ನೀರಿನ ಕೊರತೆ ಎದುರಿಸುತ್ತಿದ್ದರು. ಜಮೀನಿನಲ್ಲಿ ಹಾಕಿದ್ದ ನಿಂಬೆ ಮತ್ತು ಕಬ್ಬಿನ ಬೆಳೆಗೆ ನೀರಿನ ಕೊರತೆ ತೀವ್ರವಾಗಿ ಎದುರಾಗಿದ್ದರಿಂದ ಕೊಳವೆಬಾವಿಯೊಂದನ್ನು ಲಕ್ಷಾಂತರ ರು. ವ್ಯಯಿಸಿ ಕೊರೆಸಿದ್ದರು. ದುರದೃಷ್ಟವಶಾತ್ ಅಲ್ಲಿ ನೀರು ಬೀಳಲಿಲ್ಲ. ಇಲ್ಲೇ ಅವರು ಮಾಡಿದ್ದ ತಪ್ಪು. ಆ ತಪ್ಪಿಗೆ ಅವರ ಮಗು ಶಿಕ್ಷೆ ಅನುಭವಿಸುವಂತಾಯಿತು. ಕೊರೆಯಿಸಿದ ಕೊಳವೆಬಾವಿಯನ್ನು ಅವರು ಮುಚ್ಚಿಸದೆ ಯಥಾವತ್ ಬಿಟ್ಟಿದ್ದರು. ದುರಂತೆ ಹೇಗಿದೆ ನೋಡಿ.. ಅವರದೇ ಮಗು, ಒಂದೂವರೆ ವರ್ಷದ ಸಾತ್ವಿಕ್ ಹೆಸರಿನ ಪುಟ್ಟ ಕಂದ ಅದೇ ಕೊಳವೆಬಾವಿಯಲ್ಲಿ ತಲೆಕೆಳಗಾಗಿ ಬಿದ್ದ. ಏನೂ ಅರಿಯದ ಮುಗ್ಧ ಈ ಕಂದ ಸರಿಸುಮಾರು 22 ತಾಸು ತೀವ್ರ ನೋವು ಅನುಭವಿಸಿದೆ. ವೇಗ ಮತ್ತು ತೀವ್ರ ಕಾರ್ಯಾಚರಣೆ ನಡೆಸಿದ ಬಳಿಕ ಮಗುವನ್ನು ರಕ್ಷಣಾ ಸಿಬ್ಬಂದಿ ಆ ಮಗುವನ್ನು ಜೀವಂತವಾಗಿ ಹೊರತೆಗೆದು, ಎಲ್ಲರ ಮೆಚ್ಚುಗೆಗೆ ಕಾರಣರಾದರು. ಅದೃಷ್ಟಕ್ಕೆ ಮಗು ಬದುಕಿದಲ್ಲದೆ ಆರೋಗ್ಯವಾಗಿಯೂ ಇತ್ತು. ಇದೊಂದು ಪವಾಡ ಎನ್ನಬಹುದು. ಆದರೆ, ಇಲ್ಲಿಗೆ ಎಲ್ಲ ಮುಗಿಯಿತು ಅಂತ ಅರ್ಥವಲ್ಲ. ಮುಂದೆ ಇಂಥ ಘಟನೆ ಮತ್ತೆಲ್ಲೋ ಘಟಿಸಿದರೆ ಹೇಗೆ ? ಎಲ್ಲರೂ ಸಾತ್ವಿಕ್‌ನಂತೆ ಅದೃಷ್ಟವಂತರಲ್ಲ. ಈ ಹಿಂದೆ ಇಂಥವೇ ಘಟನೆಗಳು ನಡೆದಾಗ ಮಕ್ಕಳು ಬದುಕದೆ, ಮೃತರಾಗಿದ್ದ ಘಟನೆಗಳು ನಮ್ಮ ಮುಂದೆಯೇ ಇದೆ. ಈಗ ಈ ಘಟನೆಯಿಂದ ಸಾರ್ವಜನಿಕರು ಮತ್ತು ಅಧಿಕಾರಿಗಳು ಮತ್ತು ಸರ್ಕಾರ ಕಲಿಯಬೇಕಾದ ಪಾಠಗಳು ಸಾಕಷ್ಟಿವೆ. ಸರ್ಕಾರ ಮತ್ತಷ್ಟು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ. ದಿನಗಳ ಕಳೆದಂತೆ ಈ ಘಟನೆ ಜನ–ಸರ್ಕಾರ ಮರೆಯುತ್ತಾರೆ. ಮುಂದೊಂದು ದಿನ ಮತ್ತೆ ಇಂತಹ ಘಟನೆಗಳು ನಡೆದಾಗ ಮಾತ್ರ ಎಲ್ಲರೂ ಎಚ್ಚೆತ್ತುಕೊಳ್ಳುವುದು ಪರಿಪಾಠ ಆಗಬಾರದು. ಅಸಲಿಗೆ ಭವಿಷ್ಯದಲ್ಲಿ ಇಂಥ ಘಟನೆಗಳು ನಡೆಯಲೇಬಾರದು. ತೆರೆದ ಕೊಳವೆಬಾವಿಗಳನ್ನು ಮುಚ್ಚದಿದ್ದರೆ ಅದಕ್ಕೆ ಆಯಾ ಭಾಗದ ಅಧಿಕಾರಿಗಳು ಹೊಣೆಯನ್ನಾಗಿ ಮಾಡಬೇಕು. ಈ ನಿಯಮ ಈಗಾಗಲೇ ಮಾರ್ಗಸೂಚಿಯಲ್ಲಿದೆ. ಕೊಳವೆಬಾವಿ ಕೊರೆಸುವುದಕ್ಕೆ 15 ದಿನ ಮೊದಲು ಅನುಮತಿ ಪಡೆಯಬೇಕು. ವಿಫಲವಾದ ಕೊಳವೆಬಾವಿಗಳನ್ನ ಕಲ್ಲು, ಮಣ್ಣು, ಇಟ್ಟಿಗೆಗಳಿಂದ ಕಡ್ಡಾಯವಾಗಿ ಮುಚ್ಚಬೇಕು. ಮುಚ್ಚಿರುವ ಬಗ್ಗೆ ಅಧಿಕಾರಿಗಳು ದೃಢಪಡಿಸಬೇಕು. ಈ ಎಲ್ಲ ನಿಯಮಗಳು ಬರೀ ಕಾಗದದಲ್ಲಿ ಮಾತ್ರ ಉಳಿಯದೆ ಇರಲಿ. ಕಡ್ಡಾಯ ಅನುಷ್ಠಾನಕ್ಕೆ ತರುವಂತಾಗಬೇಕು. ಇಷ್ಟೆಲ್ಲ ನಿಯಮಗಳು ಈಗಾಗಲೇ ಇದ್ದರೂ ಇಂಡಿ ತಾಲೂಕಿನಲ್ಲಿ ಘಟನೆ ಮರುಕಳಿಸಿರುವುದು ದುರಂತವೇ ಸರಿ ಮತ್ತು ಆಡಳಿತ ವ್ಯವಸ್ಥೆಯ ನಿರ್ಲಕ್ಷ್ಯವೂ ಹೌದು. ಈ ವಿಷಯದಲ್ಲಿ ಅಧಿಕಾರಿಗಳನ್ನು ಮಾತ್ರ ದೂಷಿಸಿದರೆ ಸರಿಯಲ್ಲ. ಜನರ ಹೊಣೆಗಾರಿಕೆಯೂ ಇಲ್ಲಿ ಪ್ರಮುಖ. ಇಂತಹ ವಿಫಲ ಕೊಳವೆಬಾವಿಗಳು ಇದ್ದರೆ ಸ್ವಯಂ ಪ್ರೇರಿತವಾಗಿ ಮುಚ್ಚುವ ನೈತಿಕತೆಯನ್ನು ಜನರೇ ಕಲಿಯಬೇಕು. ಇದರಿಂದ ಕಂದಮ್ಮಗಳ ಪ್ರಾಣ ಕಾಪಾಡಲು ಸಾಧ್ಯ.

# ಬೆಳಕಿನ ಹಾದಿ

## ಒಳ್ಳೆದಾಯ್ತು ಬಿಡಿ



ಒಂದು ಊರಲ್ಲಿ ಒಬ್ಬ ರಾಜ ಇದ್ದನು. ಅವನಿಗೆ ಒಬ್ಬ ಮಂತ್ರಿ ಇದ್ದನು. ಆ ಮಂತ್ರಿ ಹೇಗಿದ್ದ ಎಂದರೆ ಯಾವಾಗಲೂ ಎಲ್ಲರಿಗೂ ಸದಾ ಒಳ್ಳೆಯದೇ ಬಯಸುತ್ತಿದ್ದನು. ಒಂದು ದಿನ ರಾಜ ಮಂತ್ರಿಯ ಜೊತೆಗೆ ಬೇಟೆಯಾಡಲು ಕಾಡಿಗೆ ಹೊರಟನು. ಕಾಡಿನಲ್ಲಿ ಬೇಟೆ ಹುಡುಕುತ್ತಿರುವಾಗ ರಾಜನು ಮರದ ಒಂದು ಬೇರನ್ನು ಎಡವಿ ಬಿದ್ದನು. ಕೂಡಲೇ ಮಂತ್ರಿ ರಾಜನನ್ನು ಮೇಲೆತ್ತಿದನು. ಕಾಲಿಗೆ ತರಚಿದ ಗಾಯವಾಯ್ತು. 'ಎಡವಿದ್ದು ಒಳ್ಳೆದಾಯ್ತು ಬಿಡಿ ರಾಜರೆ' ಎಂದನು. ಮಂತ್ರಿಯ ಮಾತನ್ನು ರಾಜನಿಗೆ ಕೋಪ ಬಂತು. ನಾನು ಎಡವಿ ಬಿದ್ದರೂ ಒಳ್ಳೆದಾಯ್ತು ಎನ್ನುತ್ತಿದ್ದಾನಲ್ಲ. ಇವರನಿಗೆ ಬುದ್ದಿ ಕಲಿಸಬೇಕು ಎಂದುಕೊಂಡನು ರಾಜ.

ಸಂಜೆಯವರೆಗೂ ಹುಡುಕಿದರೂ ಬೇಟೆ ಸಿಗಲೇ ಇಲ್ಲ. ಕತ್ತಲಾಗುತ್ತದೆ ಎಂದುಕೊಂಡು ಅರಮನೆಗೆ ಮರಳಿದರು. ಕೋಪಗೊಂಡಿದ್ದ ರಾಜ ಮಂತ್ರಿಯನ್ನು ಕರೆದು, 'ಕಾಡಿನಲ್ಲಿ ಎಡವಿದ್ದು ಒಳ್ಳೆದಾಯ್ತು ಎಂದೆಯಲ್ಲವೇ?' ಎಂದು ಮಂತ್ರಿಯನ್ನು ಸೆರೆಮನೆಗೆ ಹಾಕಿದ. ಮರುದಿನ ಬೆಳಿಗ್ಗೆ ರಾಜ ಪುನಹ ಅದೇ ಕಾಡಿಗೆ ಬೇಟೆಯಾಡಲು ಹೋದನು. ಆ ದಿನ ರಾಜ ಒಬ್ಬನೇ ಕಾಡಿಗೆ ಹೋಗಿದ್ದನು. ಆಗ ಕಾಡಿನ ಜನರು ಅಲ್ಲಿ ಹಬ್ಬ ಮಾಡುತ್ತಿದ್ದರು. ದೇವಿಯ ಹಬ್ಬಕ್ಕೆ ಕಾಡಿನ ಜನರನ್ನು ಬಿಟ್ಟು ಬೇರೆಯವರನ್ನು ಬಲಿ ಕೊಡಬೇಕೆಂಬ ನಿಯಮ ಇತ್ತು. ಅದಕ್ಕಾಗಿ ಅವರು ಮನುಷ್ಯನೊಬ್ಬನನ್ನು ಹುಡುಕುತ್ತಿದ್ದರು. ಆಗ ಕಾಡಿನ ಜನರಿಗೆ ರಾಜ ಕಾಣಿಸಿದನು. ಅವರು ರಾಜನನ್ನು ಸೆರೆ ಹಿಡಿದು ತಂದರು. ರಾಜನನ್ನು ಬಲಿ ಕೊಡಲು ಎಲ್ಲ ಸಿದ್ದತೆ ಮಾಡಿಕೊಂಡರು.

ಇನ್ನೇನು ಖಡ್ಗವನ್ನು ಎತ್ತಿ ರಾಜನ ಶಿರ ಕಡಿಯಬೇಕು ಎನ್ನುವ ಸಮಯದಲ್ಲಿ ಅವರ ನಾಯಕ ರಾಜನ ಕಾಲಿಗೆ ಗಾಯವಾಗಿರುವುದನ್ನು ನೋಡಿದನು. ರಾಜನನ್ನು ಬಲಿ ಕೊಡುವುದು ಬೇಡ ಎಂದು ಬಿಟ್ಟರು. ಆಗ ರಾಜನ ಪ್ರಾಣ ಉಳಿಯಿತು. ಅಲ್ಲಿಂದ ರಾಜನನ್ನು ಬಿಟ್ಟರು. ರಾಜ ಓಡೋಡಿ ಅರಮನೆಗೆ ಬಂದ. ಬಂದವನೇ ಸೀದಾ ಮಂತ್ರಿ ಇರುವ ಸೆರೆಮನೆಯ ಬಳಿ ಬಂದನು. 'ಮಂತ್ರಿ ನಿನ್ನಿಂದ ನನ್ನ ಪ್ರಾಣ ಉಳಿಯಿತು. ನಿನ್ನೆ ನಾನು ಎಡವಿ ಬಿದ್ದಾಗ ನೀನು ಒಳ್ಳೆದಾಯ್ತು ಬಿಡಿ ಎಂದಿದ್ದು ನಿಜಕ್ಕೂ ಇಂದು ನನಗೆ ಒಳ್ಳೆದೇ ಆಯ್ತು' ಎಂದು ಹೇಳಿ ಕಾಡಿನಲ್ಲಿ ನಡೆದ ಘಟನೆಯನ್ನು ಮಂತ್ರಿಗೆ ಹೇಳಿದ. ನಂತರ ಮಂತ್ರಿಯನ್ನು ಸೆರೆಮನೆಯಿಂದ ಬಿಡಿಸಿದನು. ನಂತರ ರಾಜ ಮಂತ್ರಿಯ ಬಳಿ ಕ್ಷಮೆ ಕೇಳಿದರು. ಆಗ ಮಂತ್ರಿಯು "ನಮ್ಮ ಮನಸ್ಸು ಒಳ್ಳೆಯದಾಗಿದ್ದರೆ ನಮಗೆಂದಿಗೂ ಒಳ್ಳೆಯದೇ ಆಗುತ್ತ ಬಿಡಿ. ಮನಸ್ಸಿನಲ್ಲಿ ನಾವು ಒಳ್ಳೆಯದನ್ನೇ ಬಯಸಬೇಕು. ಎಂತಹ ವೈರಿಯಾದರೂ ನಾವು ಅವರಿಗೆ ಕೆಟ್ಟದ್ದನ್ನು ಬಯಸಬಾರದು" ಎಂದನು. ಇದನ್ನರಿತ ರಾಜನು ಮುಂದಿನ ಜೀವನದಲ್ಲಿ ಒಳ್ಳೆಯದನ್ನೇ ಬಯಸುತ್ತಾ ಸುಖವಾಗಿ ಬಾಳಿದ.

**– ಬಾಣದ ಕಾದಂಬರಿ ಬಸರಕೋಡು**
ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ(ಜಿ)

**ಹಂಪಿ ಎಂದರೆ ಅದೊಂದು ಬಗೆದಷ್ಟು ದೊರಕುವ ಪೌರಾಣಿಕ, ಧಾರ್ಮಿಕ, ಸಾಹಿತ್ಯಿಕ, ಸಂಸ್ಕೃತಿಕ, ಕಲೆ, ಸಂಗೀತ, ವಾಸ್ತುಶಿಲ್ಪ, ಚರಿತ್ರೆ ಮೊದಲಾದವುಗಳ ಚಾರಿತ್ರಿಕ – ಸಾಂಸ್ಕೃತಿಕ ನಿಧಿ. ವಿಜಯನಗರ ಚರಿತ್ರೆ ಎಂದರೆ ಗತಕಾಲದ ಚರಿತ್ರೆ ಅಷ್ಟೇ ಅಲ್ಲ ನಿತ್ಯದ ಸಾಂಸ್ಕೃತಿಕ ಚರಿತ್ರೆಯೇ ಆಗಿದೆ.**

# ವಿಜಯನಗರ ಸಾಮ್ರಾಜ್ಯದ ಪ್ರಬಲ ಅರಸ ಇಮ್ಮಡಿ ಹರಿಹರ

ವಿಜಯನಗರ ಸಾಮ್ರಾಜ್ಯದ ಅರಸನೆಂದರೆ ಕೃಷ್ಣದೇವರಾಯ. ಹಂಪಿ ಎಂದರೆ ಕಲ್ಲಿನ ತೇರು, ಉಗ್ರ ನರಸಿಂಹ, ಕಮಲ ಮಹಲ್ ಇವು ಸಾಮಾನ್ಯವಾಗಿ ಜನಸಾಮಾನ್ಯರ ಕಣ್ಮುಂದೆ ಬರುವ ಚಿತ್ರಗಳು. ಆದರೆ ಇವಿಷ್ಟೇ ವಿಜಯನಗರ ಸಾಮ್ರಾಜ್ಯ ಹಾಗೂ ಹಂಪಿಯ ಸಂಪೂರ್ಣ ಚಿತ್ರಣಗಳಲ್ಲ. ವಿಜಯನಗರ ಸಾಮ್ರಾಜ್ಯ ಎಂದರೆ ಅಧ್ಯಯನ, ಸಂಶೋಧನೆಗಳಿಗೂ ಸವಾಲ್ ಆಗಿರುವ ಚರಿತ್ರೆ. ವಿಶಾಲ ಸಾಮ್ರಾಜ್ಯ ವಿಜಯನಗರದ ಚರಿತ್ರೆಯನ್ನು ಪರಿಪೂರ್ಣವಾಗಿ ಇದು ಮಿತ್ಯಂ ಎಂದು ಕಟ್ಟಿಕೊಡುವಲ್ಲಿ ಚರಿತ್ರಕಾರರಿಗೆ ಇದುವರೆವಿಗೂ ಸಾಧ್ಯವಾಗಿಲ್ಲ. ಇದೆ ಈ ಸಾಮ್ರಾಜ್ಯದ ಕೌತುಕ ಮತ್ತು ಕುತೂಹಲ.

ಹಾಗೇನೇ ಈಗ ಕಣ್ಮುಂದೆ ಕಾಣುವ ಅಳಿದುಳಿದ ಹಂಪಿಯ ಸ್ಮಾರಕಗಳು ಅಷ್ಟೇ ಹಂಪಿಯಲ್ಲ. ಹಂಪಿ ಎಂದರೆ ಅದೊಂದು ಬಗೆದಷ್ಟು ದೊರಕುವ ಪೌರಾಣಿಕ, ಧಾರ್ಮಿಕ, ಸಾಹಿತ್ಯಿಕ, ಸಂಸ್ಕೃತಿಕ, ಕಲೆ, ಸಂಗೀತ, ವಾಸ್ತುಶಿಲ್ಪ, ಚರಿತ್ರೆ ಮೊದಲಾದವುಗಳ ಚಾರಿತ್ರಿಕ – ಸಾಂಸ್ಕೃತಿಕ ನಿಧಿ. ವಿಜಯನಗರ ಚರಿತ್ರೆ ಎಂದರೆ ಗತಕಾಲದ ಚರಿತ್ರೆ ಅಷ್ಟೇ ಅಲ್ಲ ನಿತ್ಯದ ಸಾಂಸ್ಕೃತಿಕ ಚರಿತ್ರೆಯೇ ಆಗಿದೆ. ನಾಲ್ಕು ಮನೆತನಗಳಾದ ಸಂಗಮ,ಸಾಳವ, ತುಳುವ ಹಾಗೂ ಅರವೀಡು ಮನೆತನಗಳ ಸುಮಾರು 25 ಅರಸರುಗಳು ಸುಮಾರು 229 ವರ್ಷಗಳ ಕಾಲ ಆಡಳಿತ ನಡೆಸಿದ್ದಾರೆ. ಈ ದೀರ್ಘಕಾಲದ ಆಡಳಿತದಲ್ಲಿ ಪ್ರೌಢದೇವರಾಯ ಮತ್ತು ಕೃಷ್ಣದೇವರಾಯ ಈ ಬಾರಿ ಅರಸರುಗಳ ಹೆಸರುಗಳು ಮಾತ್ರ ಪ್ರಮುಖವಾಗಿ ಕೇಳಿಬರುತ್ತವೆ. ಆದರೆ ಇವರಷ್ಟೇ ಪ್ರಸಿದ್ಧಿ ಪಡೆಯಬಹುದಾದ ಅರಸರುಗಳೆಂದರೆ ಇಮ್ಮಡಿ ಹರಿಹರ ಮತ್ತು ಇಮ್ಮಡಿ ದೇವರಾಯ.

ಸಂಗಮ ವಂಶದ ಈ ಅರಸರು ವಿಜಯನಗರ ಸಾಮ್ರಾಜ್ಯವನ್ನು ತಮ್ಮ ತೋಳ್ಬಲದಶಕ್ತಿ, ಬುದ್ದಿ ಶಕ್ತಿ, ಸಂಕಲ್ಪ, ದೂರದೃಷ್ಟಿಗಳಿಂದ ಸಾಮ್ರಾಜ್ಯಕ್ಕೆ ಭದ್ರ ಬುನಾದಿಯನ್ನು ಹಾಕಿಕೊಟ್ಟವರು.ಇವರು ಹಾಕಿಕೊಟ್ಟ ಮಾರ್ಗದಲ್ಲಿ ಮುಂದೆ ಬಂದ ಅರಸರುಗಳು ಸಾಮ್ರಾಜ್ಯವನ್ನು ಉನ್ನತ ಮಟ್ಟಕ್ಕೆ ಏರಿಸಿದವರು.ಹೀಗೆ ಬೆಳದು ಬಂದ ಸಾಮ್ರಾಜ್ಯವನ್ನು ಕ್ರಿ.ಶ.1509 ರಿಂದ ಕ್ರಿ.ಶ.1529 ರವರೆಗೆ ಆಳ್ವಿಕೆ ಮಾಡಿದ ಕೃಷ್ಣದೇವರಾಯರ ಕಾಲವನ್ನು ಸುವರ್ಣಯುಗವೆಂದು ಕರೆಯಲಾಗಿದೆ. ಈ ಸುವರ್ಣ ಯುಗದ ಕಾಲಘಟ್ಟಕ್ಕಿಂತ ಮುನ್ನ 1942ರ ಸುಮಾರಿಗೆ ವಿಜಯನಗರಕ್ಕೆ ಬಂದ ಅಬ್ದುಲ್ ರಜಾಕ್‌ಎಂಬ ಪರ್ಷಿಯಾದ ಪ್ರವಾಸಿಗ ಅವತ್ತಿನ ಹಂಪಿಯನ್ನು ಕಂಡು ಇಂತಹ ನಗರವನ್ನು ನಾನು ಕಂಡಿಲ್ಲ, ಇಲ್ಲ ಕಿವಿ ಕೇಳಿಲ್ಲ. ಈ ನಗರವನ್ನು ಹೀಗೆ ನಿರ್ಮಿಸಿದ್ದಾರೆಂದರೆ ಏಳು ದುರ್ಗಗಳು ಏಳುಕೋಟೆಗಳು ಒಂದೊಂದು ಆವರಿಸಿಕೊಂಡಿವೆ ಹಾಗೂ ವಿಜಯನಗರದಲ್ಲಿ ನಡೆಯುತ್ತಿದ್ದ ಮಹಾ ನವಮಿ ಉತ್ಸವವನ್ನು ಸಹ ವರ್ಣಿಸಿದ್ದ ಅಂದರೆ ಪ್ರಾರಂಭದ ವಿಜಯನಗರ ಸಾಮ್ರಾಜ್ಯ ಮೋಹನತ್ತವಾಗಿತ್ತು ಎನ್ನುವುದು ಈ ಪ್ರವಾಸಿಗರ ಬರಹಗಳಿಂದ ತಿಳಿದುಬರುತ್ತದೆ .ದೇಶ ಅಷ್ಟೇ ಅಲ್ಲ ವಿದೇಶಗಳಲ್ಲಿಯು ಕುತೂಹಲ ಮೂಡಿಸಿದ ಸಾಮ್ರಾಜ್ಯಕ್ಕೆ ಬದ್ರಬುನಾದಿಯನ್ನು ಹಾಕಿಕೊಟ್ಟವ ಇಮ್ಮಡಿ ಹರಿಹರ.ಈ ಅರಸನ ಕುರಿತು ಒಂದಿಷ್ಟು ಮಾಹಿತಿ.



**ಎಂ.ಎಂ.ಶಿವಪ್ರಕಾಶ**
**ಲೇಖಕರು: ಹೊಸಪೇಟೆ**
**ಮೊ: 9449654489**
Scan For Digital Colourful
HAMPI TIMES E-paper

ಇಮ್ಮಡಿ ಹರಿಹರ ಸಂಗಮ ವಂಶದ ಅರಸ. 1377 ರಿಂದ 28ವರ್ಷಗಳಕಾಲ ಆಳ್ವಿಕೆ ನಡೆಸಿದ ಎಂಬುದು ಶಾಸನಗಳಿಂದ ವಿದ್ವಾಂಸರು ಖಚಿತಪಡಿಸಿದ್ದಾರೆ. ಇವನು ಒಂದನೇ ಬುಕ್ಕರಾಯ ಮತ್ತು ಗೌರಂಬಿಕೆಯರ ಮಗ. ಇವನ ಜನನ ಬಾಲ್ಯ ಮಾಹಿತಿ ಲಭ್ಯವಾಗಿಲ್ಲ. ಉತ್ತಮ ಆಡಳಿತಗಾರ ಪ್ರಜಾನುರಾಗಿ ಹಿಂದೂ ಧರ್ಮದ ರಕ್ಷಕನಾಗಿ ತನ್ನ ಆಡಳಿತದಲ್ಲಿ ಅನೇಕ ಧಾರ್ಮಿಕ ಸಾಮಾಜಿಕ ಸಾಂಸ್ಕೃತಿಕ ರಾಜಕೀಯ ಕಾರ್ಯಗಳನ್ನು ನಿರ್ವಹಿಸಿದ್ದವನು ಸುಮಾರು 28 ವರ್ಷಗಳ ಕಾಲ ಆಡಳಿತ ನಡೆಸಿದ ವಿಜಯನಗರ ಸಾಮ್ರಾಜ್ಯದ ಏಕೈಕ ಅರಸ ಎಂಬ ಹೆಗ್ಗಳಿಕೆ ಇವನದು. ಮಧ್ಯಕಾಲಿನ ಭಾರತದ ಸಂದರ್ಭದಲ್ಲಿ ಉತ್ತರ

ಭಾರತದ ದಾಳಿಗಳಿಂದ ದಕ್ಷಿಣ ಭಾರತದಲ್ಲಿ ಆತಂಕದ ರಾಜಕೀಯ ಪರಿಸ್ಥಿತಿ ಉಂಟಾದ ಸಂದರ್ಭದಲ್ಲಿ ಹಿಂದೂ ಧರ್ಮದ ಸಂಸ್ಕೃತಿ ರಕ್ಷಿಸಲು ಇವನು ಮಹತ್ವವನ್ನು ನೀಡಿದ್ದನು ಎನ್ನುವುದು ಮಹತ್ವ ಪಡೆಯುತ್ತದೆ.

ಇಮ್ಮಡಿ ಹರಿಹರನು ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡು ಆಂಧ್ರದ ರೆಡ್ಡಿಗಳ ದಮನಮಾಡಿ ವಾರಂಗಲ್ಲಿನ ದಂಡೆಯಾತ್ರೆ ಮಾಡಿ ಆಧೋನಿ ಮತ್ತು ರಾಯಚೂರು ಕೋಟೆಗಳನ್ನು ವಶಪಡಿಸಿಕೊಂಡು ತೆಲಂಗಾಣ ಪ್ರದೇಶಗಳ ನಂತರ ಗೋವಾ ರಾಜ್ಯ ಮೊದಲಾದವುಗಳನ್ನು ತನ್ನ ಸಾಮ್ರಾಜ್ಯಕ್ಕೆ ಸೇರ್ಪಡೆಸಿಕೊಂಡಿದ್ದನು. ಮೊಟ್ಟ ಮೊದಲ ಬಾರಿಗೆ ಸಿಲೋನಿನ ಮೇಲು ದಂಡೆತ್ತಿ ಹೋಗಿ ಅದನ್ನು ತನ್ನ ಸಾಮ್ರಾಜ್ಯಕ್ಕೆ ಒಳಪಡಿಸಿಕೊಂಡ ಸಾಮ್ರಾಜ್ಯದ ಆರಂಭದಲ್ಲಿ ವ್ಯವಸ್ಥಿತವಾಗಿ ವಿಸ್ತರಿಸಿ ಅದರ ತಳಹದಿಯ ಮೇಲೆ ಸಾಮ್ರಾಜ್ಯವನ್ನು ಕಟ್ಟಿದ ಕೀರ್ತಿ ಇಮ್ಮಡಿ ಹರಿಹರನಿಗೆ ಸಲ್ಲುತ್ತದೆ. ಹರಿಹರನ ಆಳ್ವಿಕೆಯಲ್ಲಿ ವಿಜಯನಗರ ಸಾಮ್ರಾಜ್ಯವು ಇಡೀ ದಕ್ಷಿಣ ಭಾರತದ ತುಂಬ

ವಿಸ್ತರಿಸಿಕೊಂಡಿತು. ಆಯಕಟ್ಟಿನ ಸ್ಥಳಗಳಲ್ಲಿ ತನ್ನ ಮಕ್ಕಳು ಇತರೆ ದಂಡನಾಯಕರನ್ನು ನೇಮಿಸಿಕೊಂಡು ರಾಜ್ಯಭಾರ ಮಾಡುತ್ತಿದ್ದ.




### ಸಮಾಜಿಕ ಕಾರ್ಯಗಳು

ವಿಜಯನಗರ ಸಾಮ್ರಾಜ್ಯದ ಮೊದಲ ಅರಸರುಗಳು ಕೃಷಿಗೆ ಅವಶ್ಯವಾಗಿದ್ದ ನೀರಿನ ಸೌಲಭ್ಯವನ್ನು ಅರಿತು ಸಾಮ್ರಾಜ್ಯದ ಪ್ರಾರಂಭದಲ್ಲೇ ಕೆರೆ ಕಾಲುವೆಗಳ ನಿರ್ಮಾಣ ಕೈಗೆತ್ತಿಕೊಂಡು ಅನೇಕ ಹೊಸಕೆರೆಗಳ ನಿರ್ಮಾಣ, ಹಳೆಯಕೆರೆಗಳ ಜೀರ್ಣೋದ್ಧಾರ, ತೂಬೂ ಮತ್ತು ಕಾಲುವೆಗಳನ್ನು ನಿರ್ಮಿಸಲು ಪ್ರಥಮ ಆದ್ಯತೆಯನ್ನು ನೀಡಿದ್ದ ಎನ್ನುವುದು ತಿಳಿದು ಬರುತ್ತದೆ. ಅರಸರು ದಂಡನಾಯಕರು ರಾಜವಂಶಸ್ಥರು ವರ್ತಕರು ಹೀಗೆ ಅನೇಕರು ಸಾಮಾಜಿಕವಾಗಿ ಉಪಯುಕ್ತವಾಗುತ್ತಿದ್ದ ಕೆರೆ ಕಾಲುವೆಗಳ ನಿರ್ಮಾಣವನ್ನು ಕೈಗೊಂಡಿದ್ದವರು. ಹರಿಹರನ ಅಧೀನ ಅಧಿಕಾರಿಗಳು ಹರಿಹರನ ಹೆಸರಿನಲ್ಲಿ ಹಲವಾರು ಕೆರೆಗಳನ್ನ ಕಟ್ಟಿಸಿದ್ದಾರೆ ಒಂದು ಸಾಮ್ರಾಜ್ಯದ ಬೆಳವಣಿಗೆಗೆ ಅದರ ಆದಾಯ ಪ್ರಮುಖ ಪಾತ್ರ ವಹಿಸುತ್ತದೆ, ಹೀಗಾಗಿ ಕೆರೆ ಕಾಲುವೆಗಳನ್ನು ನಿರ್ಮಿಸುವುದರ ಮೂಲಕ ಕೃಷಿಗೆ ಆದ್ಯತೆ ನೀಡಿ ಕುಡಿಯುವ ನೀರಿನ ಜೊತೆಗೆ ವ್ಯವಸಾಯಕ್ಕೂ ಈ ಕೆರೆ ಕಾಲುವೆಗಳ ನೀರುಗಳನ್ನು ಬಳಸುತ್ತಿದ್ದರು. ಹೀಗಾಗಿ ಇವರ ಕಾಲದಲ್ಲಿ ಕೃಷಿ ಸಮೃದ್ಧವಾಗಿತ್ತು.ಮುಂದೆ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಈ ಕೆರೆ ಕಾಲುವೆಗಳಿಗೆ ಅಷ್ಟು ಅರಸರುಗಳು ಆಧ್ಯತೆನೀಡಿದ್ದರು.. ಅಂದಿನ ಕೆರೆ ಕಾಲುವೆಗಳು ನಮ್ಮ ಕಾಲಘಟ್ಟದಲ್ಲಿಯೂ ಮಹತ್ವದ ನೀರಾವರಿಯ ಮೂಲಗಳಾಗಿವೆ. ಕೃಷಿ ವ್ಯಾಪಾರಗಳಿಂದ ವರ್ತಕರು ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸುತ್ತಿದ್ದರು. ಈ ವ್ಯಾಪಾರ ವ್ಯವಹಾರಗಳಿಂದ ಬರುತ್ತಿದ್ದ ಸುಂಕದಿಂದ ರಾಜ್ಯದ ಆಡಳಿತ ನಡೆಯುತ್ತಿತ್ತು .ವಿಜಯನಗರ ಪಟ್ಟಣ ಹಂಪಿಯ ಅನೇಕ ದೇವಾಲಯಗಳ ಮುಂದಿನ ವಿಶಾಲವಾದ ರಸ್ತೆಗಳಲ್ಲಿ ಮಂಟಪಗಳಲ್ಲಿ ವ್ಯಾಪಾರ ವಹಿವಾಟುಗಳು ನಡೆಯುತ್ತಿದ್ದವು

### ಸಾಹಿತ್ಯಿಕ ಕಾರ್ಯಗಳಿಗೆ ಪ್ರೋತ್ಸಾಹ

ಇಮ್ಮಡಿ ಹರಿಹರ ಸಾಹಿತ್ಯದ ಕಾರ್ಯಗಳಿಗೆ ಉದಾರವಾದ ಬೆಂಬಲ ಪ್ರೋತ್ಸಾಹ ನೀಡಿದ್ದಾನೆ ಎನ್ನುವುದು ಶಾಸನಗಳಿಂದ ತಿಳಿದುಬರುತ್ತದೆ. ವೇದಗಳಿಗೆ ಭಾಷ್ಯವನ್ನು ಬರೆಯುವ ಕಾರ್ಯವನ್ನು ಬೆಂಬಲಿಸಿದ್ದನು. ಈ ಕಾರ್ಯವನ್ನು ಮಾಡಿದ ಸಾಯನಾಚಾರ್ಯರು ಇವರಿಗೆ ಸಹಕರಿಸಿದ್ದ ನಾರಾಯಣ ವಾಜಪೇಯಿ ಯಾಜಿ,ನರಹರಿ ಸೋಮಯಾಜಿ ಮತ್ತು ಪಂಡಿತದೀಕ್ಷಿತರುಗಳಿಗೆ ಹರಿಹರನು ಉದಾರವಾಗಿ ದಾನ ಮಾಡಿದ ಮಾಹಿತಿ ಲಭ್ಯವಾಗುತ್ತದೆ. ಇದರಿಂದಾಗಿ ವೇದ ಭಾಷ್ಯ ಪ್ರವರ್ತಕ ಎನ್ನುವ ವಿಶೇಷಣಕ್ಕೆಇಮ್ಮಡಿ ಹರಿಹರ ಭಾಜನನಾಗಿದ್ದಾನೆ.ಇವನ ಸಾಮ್ರಾಜ್ಯದಲ್ಲಿ ಹಲವಾರು ಮಂದಿ ಪಂಡಿತರಿದ್ದರು ಅವರಗಳಲ್ಲಿ ವಿಷ್ಣು ಸೋಮಯಾಜಿ ಪ್ರಮುಖನಾದವ. ಇವನು ಭಗವದ್ಗೀತೆ ಮತ್ತು ರಾಮಾಯಣದ ಮೇಲೆ ವ್ಯಾಖ್ಯಾನಗಳನ್ನು ಬರೆದವನು, ಇಮ್ಮಡಿ ಹರಿಹರನ ಆಶ್ರಯದಲ್ಲಿ ವಿರುಪಾಕ್ಷ ಪಂಡಿತ ಎಂಬ ಕವಿ ಇದ್ದ. ಇವನ ಹರಿಹರ ಕಾಲದ ಪ್ರಮುಖ ಕವಿಯಾಗಿದ್ದ. ವಿರುಪಾಕ್ಷ ಪಂಡಿತ 13 ಗ್ರಂಥಗಳನ್ನು ರಚಿಸಿದ್ದಾರೆ. ಇಮ್ಮಡಿ ಹರಿಹರನ ಮಗ ಇಮ್ಮಡಿ ವಿರೂಪಾಕ್ಷ ಉತ್ತಮ ಸಂಸ್ಕೃತ ಕವಿಯಾಗಿದ್ದ .ಇವನು ನಾರಾಯಣ್ಣೇವಿಲಾಸ ಮತ್ತು ಉನ್ಮತ್ತರಾಘವ ಎನ್ನುವ ಎರಡು ಸಂಸ್ಕೃತ ನಾಟಕಗಳನ್ನು ರಚಿಸಿದ್ದಾನೆ. ಹರಿಹರನ ದಂಡನಾಯಕನಾಗಿದ್ದು ಮುದ್ದ ದಂಡೇಶ ಕವಿಗೆ ಆಶ್ರಯ ನೀಡಿದ್ದ .ಈತ ಧರ್ಮನಾಥ ಪುರಾಣವನ್ನು ಸಹ ರಚಿಸಿದವನು. ಇಮ್ಮಡಿ ಹರಿಹರ ಅರಸ ಅಷ್ಟೇ ಅಲ್ಲ ಸ್ವತಃ ಪಂಡಿತನು ಆಗಿದ್ದು ಕವಿಯಾಗಿ ರಚಿಸಿದ ನಿಘಂಟು ಏಕಾಕ್ಷರ.

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ನಂತರ ಪ್ರಾರಂಭಿಕ ಅರಸರುಗಳ ಆಳ್ವಿಕೆಯಲ್ಲಿ ಇಮ್ಮಡಿ ಹರಿಹರನ ಆಳ್ವಿಕೆ ಮಹತ್ತರದ್ದಾಗಿದೆ. ವಿಜಯನಗರ ಸಾಮ್ರಾಜ್ಯ ರಾಜಧಾನಿ ಪಟ್ಟಣಕ್ಕೆ ವ್ಯವಸ್ಥಿತವಾದ ಅಸ್ತಿಭಾರವನ್ನು ಹಾಕಿಕೊಟ್ಟವನು ಇಮ್ಮಡಿ ಹರಿಹರ ಎಂದು ಇತಿಹಾಸಕಾರರು ದಾಖಲಿಸುತ್ತಾರೆ. ಈತನ ಕಾಲವನ್ನು ದಕ್ಷಿಣ ಭಾರತದ ಪುನರುತ್ಥಾನ ಕಾಲವೆಂದು ಹೇಳುತ್ತಾರೆ ಇವನ ಆಳ್ವಿಕೆಯನ್ನು ದಾಖಲಿಸಿದ ಶಾಸನಗಳು ಕರ್ನಾಟಕದಲ್ಲಿ ಅಷ್ಟೇ ಅಲ್ಲ ಆಂಧ್ರಪ್ರದೇಶ, ತೆಲಾಂಗಣ, ಗೋವಾ ತಮಿಳುನಾಡು ರಾಜ್ಯಗಳಲ್ಲಿಯೂ ದೊರತಿವೆ ಈ ಶಾಸನಗಳು ಕನ್ನಡ ಸಂಸ್ಕೃತ ತೆಲುಗು ಮತ್ತು ತಮಿಳು ಭಾಷೆಗಳಲ್ಲಿವೆ. ಕನ್ನಡ ಮತ್ತು ಸಂಸ್ಕೃತ ಭಾಷೆಯ 340ಶಾಸನಗಳು. ತೆಲುಗು ಭಾಷೆಯ 25 ಶಾಸನಗಳು, ತಮಿಳು ಭಾಷೆಯ 102 ಶಾಸನಗಳು ಕಡತ ಕಾಗದಗಳಲ್ಲಿ ದಾಖಲಾಗಿರುವ 84 ಶಾಸನಗಳು ಇತರೆ 11 ಶಾಸನಗಳು ಒಟ್ಟು 574 ಶಾಸನಗಳನ್ನು ಗುರುತಿಸಿ ಡಾ.ನಾಗರಾಜಪ್ಪ ಇವರು ಇಮ್ಮಡಿ ಹರಿಹರನ ಶಾಸನಗಳು ಎಂಬ ಗ್ರಂಥವನ್ನು ಮೊದಲ ಬಾರಿಗೆ ಸಂಪಾದಿಸಿದ್ದಾರೆ. ಇದನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿ, ಪ್ರಕಟಿಸಿದೆ. ಇಮ್ಮಡಿ ಹರಿಹರನ ಕನ್ನಡ ಸಂಸ್ಕೃತ ತೆಲುಗು ತಮಿಳು ಭಾಷೆಗಳ ಎಲ್ಲಾ ಶಾಸನಗಳು ಈ ಗ್ರಂಥದಲ್ಲಿವೆ.

ಇಮ್ಮಡಿ ಹರಿಹರನ ಅಧ್ಯಯನ ನಡೆಸಿರುವ ವಿದ್ವಾಂಸರು ಉತ್ತರದ ದಾಳಿಗಳಿಂದ ಉಂಟಾದ ರಾಜಕೀಯ ಶೋಭೆಯನ್ನು ತಮನಗೊಳಿಸಿ, ದಕ್ಷಿಣ ಭಾರತದಲ್ಲಿ ಶಾಂತಿ ನೆಲೆಸುವಂತೆ ಮಾಡಿದವ ಇಮ್ಮಡಿ ಹರಿಹರ, ಇಷ್ಟ ಅಲ್ಲ ಇವನು ವಿಜಯನಗರ ಪಟ್ಟಣ ವಿಸ್ತರಣೆಗೆ ಸಮರ್ಥವಾಗಿ ಅಸ್ತಿಭಾರ ಹಾಕಿ ಕಟ್ಟಿದವನು ಎನ್ನುತ್ತಾರೆ. ಇಮ್ಮಡಿ ಹರಿಹರ ಕ್ರಿ.ಶ. 1377 ರಿಂದ 1404 ರವರೆಗೆ 28 ವರ್ಷಗಳ ಕಾಲ ಸುಧೀರ್ಘ ರಾಜ್ಯಭಾರ ಮಾಡಿದ ವಿಜಯನಗರದ ಏಕೈಕ ಅರಸ. ಇವನು ಸಮರ್ಥ ಆಡಳಿತಗಾರ ದೃಷ್ಟಿಯುಳ್ಳ ಅರಸ, ವಿಜಯನಗರದ ವಿಶಾಲ ಸಾಮ್ರಾಜ್ಯದ ಕನಸನ್ನು ಕಂಡು ನನಸು ಮಾಡಿದ. ಇವನು ತನ್ನ ಸಾಮ್ರಾಜ್ಯವನ್ನು ಪೂರ್ವ ಮತ್ತು ಪಶ್ಚಿಮದ ಕಡಲುಗಳವರೆಗೂ ವಿಸ್ತರಿಸಿ ದಕ್ಷಿಣದಲ್ಲಿ ರಾಮೇಶ್ವರ, ಆಂಧ್ರದ ಗೋದಾವರಿ ನದಿಯ ತಟದವರೆಗೂ ಇವನು ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದ್ದೆ.ಇವನನ್ನು ರಾಜ ಪರಮೇಶ್ವರ, ಮಹಾರಾಜಾಧಿರಾಜ, ಅರಿರಾಯವಿಭಾಡ, ಹಿಂದುರಾಯ ಸುರತ್ರಾಣ ಮೊದಲಾದ ಬಿರುದಾವಳಿಗಳಿಂದ ಇವನನ್ನು ಕರೆದಿದ್ದಾರೆ. ಇಮ್ಮಡಿ ಹರಿಹರನು ಕ್ರಿ.ಶ.1404 ಆಗಸ್ಟ್ 30 ರಂದು ಮರಣ ಹೊಂದಿದ ಎಂದು ಶಾಸನದಿಂದ ತಿಳಿದು ಬರುತ್ತದೆ. ಒಟ್ಟಾರೆ ಇಮ್ಮಡಿ ಹರಿಹರನ ತನ್ನ ಆಡಳಿತದಲ್ಲಿ ಇಡೀ ದಕ್ಷಿಣ ಭಾರತದಲ್ಲಿ ಶಾಂತಿ ನೆಲೆಸುವಂತೆ ಮಾಡಿದ ರಾಜ ಎಂದು ಗುರುತಿಸಲಾಗಿದೆ. ಆದರೆ ಇವನು ಚರಿತ್ರೆಯಲ್ಲಿ ಹೆಚ್ಚು ದಾಖಲಾಗಿ ಜನಸಾಮಾನ್ಯರಿಗೆ ಪರಿಚಯವಿಲ್ಲದ ರಾಜನಾಗಿ ಉಳಿದಿರುವುದು ದುರ್ದೈವದ ಸಂಗತಿ.

# ಗೆದ್ದವರಿಗೆ ತಲೆಕೊಟ್ಟರೆ ಸೋತವರಿಗೆ ಹೆಗಲು ಕೊಡಿ....

**■ ಡಾ. ಶೈಲಜ ಪವಾಡಶೆಟ್ರ** ಹೂವಿನ ಹಡಗಲಿ

ಎ ಪ್ರಿಯಾಂಕ ರಾಜಾಬಿ ಅನುಶ್ರೀ ಭೂಮಿ ಅಮೃತ ವಿದ್ಯಾಲಕ್ಷ್ಮಿ ಪಿ ವಿರೇಶ್ ಪ್ರಥಮ ರ್ಯಾಂಕ್ ದ್ವಿತೀಯ ರ್ಯಾಂಕ್ ತೃತೀಯ ರ್ಯಾಂಕ್ ಆರನೇ ರ್ಯಾಂಕ್ . ಪದವಿ ಪೂರ್ವ ಫಲಿತಾಂಶ ಬಂದಾಗಿಂದ ಎಲ್ಲರ ಸ್ಟೇಟಸ್ಸುಗಳಲ್ಲೂ ಇದೇ ಸುದ್ದಿ ಇದೇ ಮಾತು. ಅವರು ನಮ್ಮ ಶಾಲೆಯ ವಿದ್ಯಾರ್ಥಿಗಳು ನಮ್ಮ ಶಾಲೆಯ ಪ್ರತಿಭೆಗಳು. ಬಡತನದ ಪ್ರತಿಭೆಗಳು, ಊರ ಹೆಮ್ಮೆ ಕಾಲೇಜಿನ ಹೆಮ್ಮೆ. ಹೀಗೆ ಹಲವಾರು ಪ್ರಶಂಸೆಯ ಮಾತುಗಳೇ. ಇದರ ಬಗ್ಗೆ ನನ್ನ ಯಾವುದೇ ಟೀಕೆಗಳಿಲ್ಲ. ಆ ಪ್ರತಿಭೆಗಳಿಗೆ ನನ್ನಿಂದಲೂ ಶುಭಾಶಯ ಅಭಿನಂದನೆಗಳು ಸಲ್ಲುತ್ತವೆ.

ಆದರೆ ನನ್ನ ಹಂಬಲವಿಷ್ಟೇ. ಕಡಿಮೆ ಅಂಕ ಪಡೆದ ಫೇಲಾದ ವಿದ್ಯಾರ್ಥಿಗಳಿಗೂ ನಮ್ಮದೊಂದು ಸಮಾಧಾನದ ಮಾತಿರಲಿ. ಸೋತ ಮಕ್ಕಳು ಸಹಜವಾಗಿ ಸಾಕಷ್ಟು ಹಂಬಲ ಹೊತ್ತ ಓದಿರುತ್ತಾರೆ ಕಷ್ಟಪಟ್ಟಿರುತ್ತಾರೆ. ಆದರೆ ಕಾಲೇಜು ಬೋಧನೆಗಳ ಕೊರತೆ ಇರಬಹುದು ನೆನಪಿನ ಶಕ್ತಿ ಕಡಿಮೆ ಇರಬಹುದು ಓದಿದನ್ನ ವ್ಯವಸ್ಥಿತವಾಗಿ ಬರೆಯುವ ನ್ಯೂನ್ಯತೆ ಇರಬಹುದು ಬರವಣಿಗೆ ನಿಧಾನವಿರಬಹುದು ಕೆಲವು ವಿದ್ಯಾರ್ಥಿಗಳಿಗೆ ಗೊಂದಲಗೊಳ್ಳುವ ಗಾಬರಿಗೊಳ್ಳುವ ಸ್ವಭಾವವಿರುತ್ತದೆ. ಇದು ಕೂಡ ಅವರ ಅಂಕದ ಕೊರತೆಗೆ ಕಾರಣವಾಗಿರಬಹುದು. ಕೆಲವರಿಗೆ ಬೇರೆ ವಿಷಯಗಳಲ್ಲಿ ಆಸಕ್ತಿ ಇದ್ದು ಇದರಲ್ಲಿ ನೀರಸತನ ವಿರಬಹುದು.

ಭಾರತೀಯ ಕಾವ್ಯ ಮೀಮಾಂಸಕರು ಹೇಳುತ್ತಾರೆ "ಪ್ರತಿಭೆ ವುತ್ಪತ್ತಿ ಸತತಾಭ್ಯಾಸ ನವನವೋನ್ಮೇಶಶಾಲಿನಿ" ಅಂದರೆ ಕವಿತೆ ಹುಟ್ಟಬೇಕಾದರೆ ಪ್ರತಿಭೆ ಬೇಕು ಒಳಗಿನ ತುಡಿತಬೇಕು ಜೊತೆಗೆ ಸತತ ಅಭ್ಯಾಸ ಬೇಕು. ಹೀಗೆ ಒಳ್ಳೆಯ ಅಂಕಗಳ ಪಡೆಯಲು ಹಲವಾರು ವಿಷಯಗಳು ಕಾರಣವಾಗುತ್ತವೆ. ಎಲ್ಲಾ ಸಂದರ್ಭದಲ್ಲೂ ಮಕ್ಕಳಷ್ಟೇ ಹೊಣೆಗಾರರಲ್ಲ. ಸೋತು ವಿದ್ಯಾರ್ಥಿಗಳು ನಿಮ್ಮ ಮುಂದೆ ಬಂದಾಗ ನಿನ್ನ ಅಂಕ ಎಷ್ಟು? ಅಯ್ಯೋ ಇಷ್ಟೇನಾ? ಯಾಕ್



ಇಷ್ಟು ಕಡಿಮೆ ತೆಗೆದಿ? ನೋಡಲ್ಲಿ ಆಕಿ ರ್ಯಾಂಕ್ ಬಂದಾಳ ನೀನು ಆಕೆ ಹಂಗ ಓದಬೇಕಿತ್ತು, ಇಷ್ಟು ಅಂಕ ತೆಗೆದು ಮುಂದೇನ್ ಮಾಡ್ತಿ? ಈ ತರದ ಕುಗ್ಗಿಸುವ ಮಾತುಗಳನ್ನು ಆಡಬೇಡಿ.

ಹೆಚ್ಚು ಅಂಕ ಪಡೆದವರು ಮಾತ್ರ ಜೀವನದಲ್ಲಿ ಸಾಧನೆ ಮಾಡಿಲ್ಲ. ನಿನ್ನೆ ಒಂದು ಸ್ಟೇಟಸ್ ನೋಡಿದೆ ರ್ಯಾಂಕ್ ಬಂದ ವಿದ್ಯಾರ್ಥಿಗೆ ಬೇಗ ಪಿಡಯಯ ವಿಎ ಕೆಲಸ ಸಿಕ್ತು ಸೇರಿ ಅಲ್ಲಿಗೆ ನಿಂತು ಬಿಟ್ಟ. ಆದರೆ ಕಡಿಮೆ ಅಂಕ ಪಡೆದ ವಿದ್ಯಾರ್ಥಿ ಛಲದಿಂದ ಓದಿ ತಹಶಿಲ್ದಾರನಾಗಿ ಅದೇ ಕಛೇರಿಗೆ ಬಂದ. ಆಮೆ ಮೊಲದ ಓಟದಲ್ಲಿ ಎಲ್ಲರಿಗೂ ನಂಬಿಕೆ ಗೆಲುವು ಮೊಲದ್ದೇ ಆದರೆ ವಿಧಿ ಆಟ ಆಮೆ ಗೆಲ್ಲುತ್ತದೆ. ಇಂತಹ ಘಟನೆಗಳು ಸಾಕಷ್ಟು ನಮ್ಮ ಮುಂದಿವೆ. ಭವಿಷ್ಯದಲ್ಲಿ ಯಾವ ಹುತ್ತದಲ್ಲಿ ಯಾವ ಹಾವಿದೆಯೂ. ಯಾರ ಭವಿಷ್ಯದಲ್ಲಿ ಯಾವ ಸಾಧನೆ ಇದೆಯೋ ಯಾರು ಬಲ್ಲರು. ಅದಕ್ಕಾಗಿ ಮರುಭೂಮಿಯಲ್ಲಿ ಓಯಸಿಸ್ ಸಿಕ್ಕ ಹಾಗೆ ಸೋತವರಿಗೆ ನಿಮ್ಮದೊಂದು ಸಾಂತ್ವಾನದ ಮಾತಿರಲಿ. ಗೆದ್ದವರನ್ನು ತಲೆ ಮೇಲೆ ಹೊತ್ತರೆ ಸೋತವರಿಗೆ ಹೆಗಲು ಕೊಡಿ ಪುಟಿದೇಳುತ್ತಾರೆ. ಜೀವನಪೂರ್ತಿ ನಿಮಗೆ ಕೃತಜ್ಞರಾಗಿರುತ್ತಾರೆ ಮತ್ತೆ ಮತ್ತೆ ಸೋಲುವ ಆರ್‌ಸಿಬಿ (RCB)ಯನ್ನು ಒಪ್ಪಿಕೊಳ್ಳುವ ನಮಗೆ ಸೋತ ವಿದ್ಯಾರ್ಥಿಗಳನ್ನು ಅಪ್ಪಿಕೊಳ್ಳುವುದು ದೊಡ್ಡ ಮಾತಲ್ಲ.




# ಅಂತರ ಗಂಗೆ
## (ಮುಗ್ಧ ಪ್ರೇಮಿಯ ಭಾವಾಂತರಂಗ)

ಕಥೆ : ಭಾಗ–1


(ಅದೆಷ್ಟೊ ಹುಡಿಗಿಯರನ್ನು ಹತ್ತಿರದಿಂದ ನೋಡಿದ್ದೇನೆ ಅವರ ಸಹ ಸಂಗಡ ಕೆಲಸ ಮಾಡಿದ್ದೇನೆ ಅವರ ಚರ್ಮದ ಬಣ್ಣ ನೋಡಿದ್ದೆನೆ, ಮನಸ್ಸಿನ ಮಾತು ಕೇಳಿದ್ದೇನೆ ಹದ ಮೀರಿದ ತಿಕ್ಕುಲುತನ ನೋಡಿದ್ದೇನೆ, ಹುಸಿ ಅಸಹಜ ಪ್ರಚೋದನೆಯನ್ನ ಅನುಬಹುಸಿದ್ದೇನೆ, ಅರೆ ಬೆತ್ತಲೆ ಮನಸ್ಸು ಕಂಡಿದ್ದೇನೆ, ಪ್ರೀತಿ ನೋಡಿದ್ದೇನೆ ಆದರೆ ಅವರಾರು ಕ್ರೀಯೆಟ್ ಮಾಡದಂತಹ ಒಂದು ವಿಶಿಷ್ಟ ಫೀಲನ್ನು ಕ್ರೀಯೆಟ್ ಮಾಡಿದಿಯಲ್ಲ ದಟ್ಸ ಗ್ರೇಟ್ವಾ ನನ್ನ ಹುಚ್ಚು ಬಯಕೆಗಳಿಗೆ ನೀನು ಏಣಿಯಾದೆ ಹಸಿ ಬಿಸಿ ಕನಸುಗಳಿಗೆ ಕಾರಣವಾದೆ, ಅವುಗಳಿಗೆ ಜೀವ ಕಳೆ ತುಂಬಿದೆ, ನನ್ನ ನಾನು ತಿಳಿಯುವಂತೆ ಮಾಡಿದೆ, "ಒಂದು ಹುಡುಗ ತನ್ನ ತಾನು ಪಾಸಿಟಿವ್ ಆಗಿ ನೋಡಿಕೊಳ್ಳುವುದನ್ನು ತನ್ನನ್ನು ಒಂದು ಹುಡಿಗಿ ಗಮನಿಸಿವುದು ಗೊತ್ತಾದ ಮೇಲೆಯೇ ಅಥಾವ ಅಂತದೆ ಒಂದು ಫೀಲ್ ಅವನಲ್ಲಿ ಬಂದಾಗ ಮಾತ್ರ". ಆ ಭಾವನೆಯನ್ನ ನನ್ನಲ್ಲಿ ಕ್ರೀಯೆಟ್ ಮಾಡಿದಿಯಲ್ಲ ಸಾಕು, "ನಿನ್ನ ಜೊತೆ ಮಾತಾಡಿದ ಸಾವಿರದಷ್ಟು ಹೆಚ್ಚು ಸಲ ನನ್ನೊಂದಿಗೆ ನಾನೆ ಮಾತನಾಡಿಕೊಳ್ಳುವಂತೆ ಮಾಡಿದ್ದೀಯ" ಅದು ತುಂಬಾ ಖುಷಿಯನ್ನು ನೀಡಿದೆ, ನೀನು ನನಗೆ ಸಿಗದೆ ಹೋಗಬಹುದು, ನಿನ್ನ ಸಹವಾಸದಿಂದ ನಾನು ದೂರವಾಗಬಹುದು ಆದರೆ ಆಡಿದ ಮಾತು ನೋಡಿದ ನೋಟ ಕಂಡ ಕನಸು ಅನುಭವಿಸಿದ ಯಾತನೆ ಕಲ್ಪಿಸಿಕೊಂಡ ಕಲ್ಪನೆ, ಕಟ್ಟಿಕೊಂಡ ಜೀವನ ಇದು ಸಾಕು, ಒಂದು ಹುಡಿಗಿಯಿಂದ ಇನ್ನೇನು ನಿರೀಕ್ಷೆ ಮಾಡ್ಲಿಕ್ಕೆ ಸಾದ್ಯ ಹೇಳು, ಸಾಕು ಅವಳಿಂದ ನಾನು ಹಾಳಾದೆ ಅನ್ನುವುದಕಿಂತ ಅವಳು ನನಗೆ ಮೋಸ ಮಾಡಿದಳು ಅನ್ನುವುದಕಿಂತ ಅವಳ ಸಹವಾಸದಲ್ಲಿದ್ದಾಗಿನ ಖುಷಿ, ಅದಮ್ಯ ಜೀವನೋತ್ಸವ, ಪ್ರತಿ ಬೆಳಕು ನೀಡುತ್ತಿದ್ದ ವಿಶೇಷತೆಗೆ ಕಾರಣವಾದವಳನ್ನ, ಜೀವಿಸಲು ಒಂದು ಕಾರಣ ಕೊಟ್ಟವಳನ್ನ, ಜೀವಕ್ಕೆ ಒಂದು ಧನ್ಯತೆಯನ್ನ ನೀಡಿದ ಅವಳಿಗೆ ಒಂದು ಧನ್ಯವಾದ ಹೇಳುವುದರಲ್ಲಿ ಪರಮಾನಂದ ಕಾಣುವುದೆ ಸರಿಯನಿಸುತ್ತದೆ.)



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ಲೇ ಮಳ್ಳಾ, ಹುಚ್ಚು ಹಿಡಿದಿದೆ ನಿನಗೆ ಹುಚ್ಚು, ಹುಚ್ಚು ಹಿಡದವರ ಥರ ಆ ಕಂಬ ಎಷ್ಟು ಅಂತ ನೋಡುತಿಯೋ ಬಾರೊ ಹೊಲಕ್ಕಾದರು ಹೋಗೋಣ, ಆ ಎರಡು ಕಂಬಗಳು ಸೇರಿ ಒಂದು ಕಂಬ ಆಗೋದಿಲ್ಲ..! ಅಂತೆಯೇ ನೀವಿಬ್ಬರೂ ಎಂದೂ ಒಂದಾಗೋದಿಲ್ಲ..!" ಒಂದು ವೇಳೆ ಒಂದಾದರೆ ಈ ಗುಡಿಯೆ ಇರಾಂಗಿಲ್ಲ! ಹ್ಹ ಹ್ಹ ಹ್ಹ...... . ಪ್ರತಿ ದಿನ ಇದೇ ಗೋಳಾಯಿತು ಇವನದು. ಹೌದು ಕಣೊ ನಾನು ಹುಚ್ಚ, ನನಗೆ ಅವಳು ತಲೆ ಕೆಡಿಸಿದ್ದಾಳೆ ಏನೀಗ, ನಿನಗೇನೊ ಗೊತ್ತು ಲವ್ ಮಾಡಿದವರ ಕಷ್ಟ, ಇವತ್ತಲ್ಲ ನಾಳೆ ಅವಳು ನನ್ನ ಮದುವೆ ಆಗಿ ನನ್ನ ಮನೆಯ–ಮನದ ರಾಣಿ ಆಗುತ್ತಾಳೆ ನೋಡು ಆ ದಿವಸ ನೀನು ಹೊಟ್ಟೆ ಉರಿದುಕೊಂಡು ಸಾಯಿತೀಯ ಅಷ್ಟೆ, ಇತ್ತೀಚಿಗೆ ನನ್ನ ಕಂಡರೆ ನಿಮಗೆಲ್ಲ ತಮಾಷೆ ಮಾಡಬೇಕು ಅನಿಸುತ್ತದೆ ಅಲ್ಲವೆ? ಬೇರೆ ಯಾರಾದರು ಈ ರೀತಿ ಹೇಳಿದ್ದರೆ ನನ್ನ ಮಾತೆ ಬೇರೆಯಾಗಿರುತಿತ್ತು ಆದರೆ ನೀನು ... . ಥೇ ಹೋಗೊ. ನನ್ನ ಜೀವದ ಗೆಳೆಯ ಜಗ್ಗನಿಗೆ ಬೈಯುತ್ತ ಕೈಯಲ್ಲಿದ್ದ ಮೊಬೈಲ್ ಇನ್ ಬಾಕ್ಸನಲ್ಲಿದ್ದ ಅವಳು ಕಳುಹಿಸಿದ್ದ "ಐ ಲವ್ ಯು ಡಿಯರ್ ಕೆಂಪೆ" ಅಂತಿದ್ದ ಮೆಸೇಜ್ ಓದುತ್ತಾ ಕಲ್ಲೇಶ್ವರ ಗುಡಿಯ ಒಂದು ಕಂಬಕ್ಕ ತಲೆಯನ್ನ ಆನಿಸಿ ಹಾಗೆ ಕಣ್ಣು ಮುಚ್ಚಿದೆ ಅದೇನೊ ಒಂದು ಥರ ಅನುಭವ, ನನಗೆ ಗೊತ್ತಿಲ್ಲದೆ ನನ್ನ ಕೈಗಳು ನಡುಗಲಿಕ್ಕೆ ಪ್ರಾರಂಭ ಮಾಡಿದುವು, ಎದೆ ಬಡಿತ ಹೆಚ್ಚಾಯಿತು, ಕೊರಳು ಕಟ್ಟಿದ ಹಾಗೆ ಅನಿಸುತು ಕಣ್ಣಾಲಿಗಳು ಹಾಗೆ ತುಂಬಿಕೊಂಡವು ನನ್ನ ಎದುರುಗಡೆ ಅವಳು! ಪಕ್ಕಾ ಕನ್ ಫರ್ಮ ಅವಳೆ!. ಚೇ ಚೆಚೆ..ಇದೆನೂ ಸಣ್ಣ ಮಗು ತರ, ಅಳುಮುಂಜ ಕಣೊ ನೀನು ಎಂತಹ ಪರಸ್ಥಿತಿ ಬಂದರು ಅಳದ ನೀನು ಇಂದೇನಾಯಿತು ನಿನಗೆ? ನೆನಪಿರಲಿ



ಹಾಂ.. ಕಣ್ಣಂಚಿನಿಂದ ಆ ಒಂದು ಹನಿ ಕೆಳಗೆ ಬಿದ್ದರೆ ನನ್ನ ಮೇಲೆ ಆಣೆ, ನಾನು ಸತ್ತೇ ಹೊಗುತ್ತೇನೆ! ಅಂದುಕೊಳ್ಳುತ್ತಾ ಸಣ್ಣ ಮಗುವಿನ ತರಹ ನನ್ನ ಹತ್ತಿರ ಬಂದು ನನ್ನ ತಲೆಯನ್ನ ನಿನ್ನ ಎದೆಯ ಮೇಲೆ ಇಟ್ಟುಕೊಂಡು ನಿನ್ನ ಬೆರಳುಗಳಿಂದ ನನ್ನ ತಲೆಯನ್ನ ಸಾವರಿಸುತ್ತ "ಇದ್ದರು ಒಟ್ಟಿಗೆ ಹೊದರು ಒಟ್ಟಿಗೆ" ಅಂದವಳು, ಸುಮಾರು ಒಂದು ವರ್ಷ ಆಯಿತು ಅಟ್ ಲೀಸ್ಟ ಒಂದು ಪತ್ರ, ಒಂದು ಫೂನ್ ಕರೆ, ಬೇಡ ಬಿಡು ಕೊನೆ ಪಕ್ಷ ಒಂದು ಮೆಸೇಜ್ ನ್ನಾದರು ಮಾಡಬಹುದಿತ್ತಲ್ಲ. ನಿನಗೆಲ್ಲಿ ಗೊತ್ತಾಗಬೇಕು ನೀನು ಇಲ್ಲದೆ ನಾನಿಲ್ಲಿ ಏನು ಅಲ್ಲ, ನೀ ಇಲ್ಲ ಅಂದರೆ ಏನು ಇಲ್ಲ, ನೀನು ಇಲ್ಲದ್ದು ಏನು ಅಲ್ಲ ಸುಚಿ (ಸುಚಿತ್ರಾ). ನೀನು ಒಂದು ಕ್ಷಣ ನನ್ನವಳಲ್ಲ, ನಾನು ಒಬ್ಬನೆ, ನನ್ನಿಂದ ನೀನು ದೂರ ಹೋಗತಿದ್ದೀಯ ಅಂತ ಕಲ್ಪನೆ ಮಾಡಿಕೊಂಡರೆನೆ ನನಗೆ ಏನೋ ಒಂತರಾ ಸಂಕಟ "ಇದ್ದು ಸತ್ತಹಾಗೆ ಸಾವಿನಲ್ಲೂ ಸೊತಹಾಗೆ" ಅನುಸುತ್ತೆ.

ಸುಚಿ, ಹೌದು ನಾನು ನಿನಗೆ ಇಷ್ಟ ಆಗಲಿಲ್ಲ ನಿಜ. ನನ್ನಲ್ಲಿ ಅಂತಹ ವಿಶಿಷ್ಟವಾದ ಯಾವ ಗುಣವು ಇಲ್ಲ ಹೀಗಿರುವಾಗ ಯಾರಿಗೆ ತಾನೆ ಇಷ್ಟ ಆಗತೀನಿ ಹೇಳು, ಪ್ರಥಮವಾಗಿ ನಾನು ಒಳ್ಳೆಯವನಲ್ಲ ಒಪ್ಪಿಕೊಳ್ಳತ್ತೇನೆ, ಬೇರೆಯವರ ಮನಸ್ಸಿಗೆ ನಾಟುವ ಹಾಗೆ ಯಾವುದನ್ನು ಹೇಳುವುದಿಲ್ಲ, ನಮ್ಮ ಮನೆಯಲ್ಲಿ ನನ್ನ ಆಯ್ಕೆ ಎಲ್ಲರ ಆಯ್ಕೆಯ ನಂತರನೇ ಆಗಿರುತ್ತದೆ. ನಾನು ಒಂದು ಸಲ ನಿರ್ಧರಿಸಿದ್ದನ್ನ ಬಹು ಬೇಗ ಬದಲಿಸುವುದಿಲ್ಲ, ನನೆಗೆ ಇಷ್ಟ ಆಗಿರುವ ಯಾವುದನ್ನು ವಿಚಾರ, ವ್ಯಕ್ತಿ, ವಸ್ತು, ಪ್ರಾಣಿ ಯಾವತ್ತು ಚನ್ನಾಗಿರಬೇಕು ಅಂತ ಆಸೆ ಪಡತೀನಿ, ಇನ್ನು ನನ್ನ ಮನಸ್ಸಿನ ವೀಚಾರವನ್ನ ಯಾರಿಗೊ ಹೇಳುವುದಿಲ್ಲ ಯಾವುದೆ ಮಾಹಿತಿಯನ್ನ ಯಾರೊಂದಿಗು ಸುಮ್ಮ–ಸುಮ್ಮನೆ ಹಂಚಿಕೊಳುವುದಿಲ್ಲ, ನೀನು ಇಲ್ಲ ಅಂದರೆ ಮತ್ತೊಬ್ಬರು ಅಂತಾನು ಅನ್ನುವುದಕ್ಕೆ ಆಗುವುದಿಲ್ಲ. ಇನ್ನು ನನ್ನ ಸ್ನೇಹಿತರೆ ಹೇಳುವಂತೆ ಸ್ವಲ್ಪ ಶಾಂತ, ಹಾಗಂತ ನಾನೇನು ಕೋಪ ಮಾಡಿಕೊಳ್ಳೊದಿಲ್ಲ ಅಂತ ಅಲ್ಲ ಸ್ವಲ್ಪ ಉಪ್ಪು–ಕಾರ ಜಾಸ್ತೀನೆ ತಿನ್ನುತ್ತೇನೆ, ಅತಿಯಾಗಿ ಸಿಟ್ಟು ಬರುವುದಿಲ್ಲ ಬಂದರೆ ಅನಾಹುತ ಗ್ಯಾರಂಟಿ ಅದು ಬೇರೆಯವರಿಗೆ ಇಲ್ಲವೆ ನನೆಗೆ ಆಗಬಹುದು!.

ನಮ್ಮಪ್ಪ ನನೆಗೆ ಗುರು, ದೈವ, ಸ್ನೇಹಿತ ಎಲ್ಲ ಆಗಿದ್ದರು ವಿಧಿಯಾಟ ಅವರೀಗ ನನ್ನ ಜೊತೆ ಇಲ್ಲ ಆದರು ಆ ರೀತಿ ಯಾವತ್ತು ಅನಿಸಿಲ್ಲ,"ನನಗೆ ಗೊತ್ತಿದೆ ನೀನ ಆ ಹುಡುಗ ಅನ್ನೊದಕಿಂತ, ಅಂತವರ ಮಗ ನೀನೇನ" ಅಂತ ಕೇಳುವುದಕ್ಕೆ ತುಂಬಾ ಇಷ್ಟ. ಒಂದು ವೇಳೆ ನಾನೇನಾದರು ನಿನ್ನ ಮದುವೆಯಾದರೆ ನಿನ್ನ ಗುಲಾಮನಾಗಿ ಬಿಡಿತಿನೇನು ಅನ್ನೊ ಭಯ ನನ್ನ ಯಾವಗಲು ಕಾಡುತ್ತದೆ, ನೀನು ತುಸು ಕೊಪಗೊಂಡರು, ಆ ಸಮಯಕ್ಕೆ ನನ್ನ ಸಕ್ಕ್ಯ ಬೇಡವೆನಿಸಿದರೂ, ನಾವು ಒಂದು ವೇಳೆ ಜಗಳ ಮಾಡಿಕೊಂಡರೂ, ಕೆಲ ಹೊತ್ತು ಮಾತನಾಡದಿದ್ದರೂ, ನಿನ್ನ ಕಣ್ಣಲ್ಲಿ ಒಂದು ಹನಿ ನೀರು ಬಂದರು ಖಂಡಿತವಾಗಿ ಹೆಳತೀನಿ ನಮ್ಮ ಪ್ರೀತಿ ಅದಾದ ಮರುಕ್ಷಣವೆ ಮತ್ತೂ ಗಾಢವಾಗಿ, ನಾವು ಮತ್ತೊಷ್ಟು ಪರಿಚಯವಾಗುತ್ತೇವೆ, ಪರಸ್ಪರ ಅರ್ಥ ಮಾಡಿಕೊಳ್ಳತೇವೆ. ಒಂದು ವೇಳೆ ಗಟ್ಟಿ ಧೈರ್ಯಮಾಡಿ ನೀನೇನಾದರು ಮುನಿಸಿಕೊಂಡರು ಮುನಿಸಿಕೊಳ್ಳಬಹುದೇನೊ ಆದರೆ ನನ್ನಿಂದ ಅದು ಸಾಧ್ಯವಿಲ್ಲ ಬಿಡು, ಅದಕ್ಕೆ ಹೇಳಿದ್ದು ನನಗೆ ನನ್ನ ಮೇಲೆ ಅನುಮಾನ ಅಂತ ಎಲ್ಲಿ ನಿನ್ನ ಗುಲಾಮ ಆಗಿ ಬಿಡಿತಿನೇನೊ ಅಂತ.

ತುಂಬಾ ಸ್ನೇಹ ಜೀವಿ, ನನ್ನ ನಿನ್ನ ಮಧ್ಯೆ ಏನೆ ಸಂಬಂಧ ವಿದ್ದರು ನಾನು ಯಾವತ್ತು ಒಬ್ಬ ಸ್ನೇಹಿತ ನಂತೆಯೆ ಇರಲು ಇಷ್ಟ ಪಡುತ್ತೇನೆ ಹಾಗೆ ಅಷ್ಟೇನು ರೂಪವಂತನೇನಲ್ಲ ಕೋಪ ಬಂದರೆ, ಬೇಸರವಾದರೆ ಊಟ ಬಿಡುವುದು ರೂಡಿ, ನಮ್ಮೂರು, ನಮ್ಮ ಜನ, ಸ್ನೇಹಿತರು ಪುಸ್ತಕ, ಕಥೆ, ಕವನ, ಹಾಡು ತುಂಬಾ ಇಷ್ಟ. ಏನಾದರು ಅಚೀವ್ ಮಾಡಬೇಕು ಅನ್ನೋ ಹಸಿವು, ಹಿಂದುಸ್ತಾನ, ಭಗವದ್ಗೀತೆ, ಶಂಕರಾಚಾರ್ಯ, ನಮ್ಮಪ್ಪ, ನಮ್ಮಣ್ಣನ ಮಕ್ಕಳು ನನ್ನ ತಂಗಿ ಬಹಳ ಇಷ್ಟ. ಹುಡಿಗಿಯರ ಜೊತೆ ಆತ್ಮೀಯವಾಗಿ ಮುಜುಗರವಿಲ್ಲದಂತೆ ಎಲ್ಲದನ್ನು ಮಾತಾಡುವುದು ಬಲು ಇಷ್ಟ. ಹಾಗಾಗಿಯೆ ಸ್ವಲ್ಪ ಕಷ್ಟ ಕೂಡ, ಇಂತಹ ಒಬ್ಬ ವೇಸ್ಟ ಫೆಲೋ ನಾನು, ಯಾರಾದರು ಕಷ್ಟದಲ್ಲಿದ್ದರೆ ಖಂಡಿತವಾಗಿ ನನ್ನಲ್ಲಿರಿವುದನ್ನ ಕೊಡಲು ಹಿಂದು ಮುಂದು ನೋಡುವುದಿಲ್ಲ, ಹಾಗಂತ ಕರ್ಣನಲ್ಲ ಇದ್ದರೆ ಖಂಡಿತ ಇಲ್ಲ ಅನ್ನಲಾಗುವುದಿಲ. ದೇವರ ಹುಂಡಿಗಿಂತ ಭಿಕ್ಷಕರ ತಟ್ಟೆಗೆ ಹಣ ಹಾಕುವುದು ತುಂಬಾ ಇಷ್ಟ. ಅತ್ಯಂತ ಬಡತನದಲ್ಲಿ ಬೆಳೆದ ಹುಡಿಗಿಯ ಬಾವನೆಗಳು ತುಂಬಾ ಇಷ್ಟ, ನ್ಯಾಚ್ಯುರಲ್ಲಾಗಿ ಹೆಚ್ಚಿನ ಅಲಾಂಕಾರವಿಲ್ಲದ ಕೆಂಪು ಅಥವ ಗುಲಾಬಿ ಇಲ್ಲವೆ ಆಳ ಸಮುದ್ರದ ನೀಲಿಯಂತಿರುವ ಸೀರೆ, ಸ್ವಲ್ಪ ಜಾಸ್ತೀನೆ ಬಂಗಾರ ಹಾಕಿ ಕೊಂಡಿರುವ ಯಾವುದೆ ಹುಡಿಗಿಯೂ ಬಹಳ ಇಷ್ಟ ಆಗುತ್ತಾಳೆ, ಮೆತ್ತಗೆ ಸಣ್ಣ ದನಿಯಲ್ಲಿ ನಗು–ನಗುತ್ತಾ ಮಾತನಾಡುವ ಹುಡಿಗಿಯರನ್ನ ಕಂಡರೆ ಖುಷಿಯಾಗುತ್ತದೆ. ಜೋರಾಗಿ ಮಾತನಾಡುವ ಹೆಜ್ಜೆ ಸಪ್ಪಳ ಆಗುವಂತೆ ನಡೆಯುವವರು ನನಗೆ ಸರಿ ಕಾಣುವುದಿಲ್ಲ, ಹೇಳು ಈ ಡರ್ಟಿಗುಣಗಳನ್ನ ಹೋಂದಿರುವ ನಾನು ಯಾರಿಗೆ ತಾನೆ ಇಷ್ಟ ಆಗಲು ಸಾದ್ಯ? ನನಗೆ ಗೊತ್ತಿರುವ ಸತ್ಯ ಇದು, ಇನ್ನು ಅದಾವ ಗುಣಗಳನ್ನು ನನ್ನಲ್ಲಿ ನೀನು ಕಂಡಿಯೋ ನನಗೆ ಗೊತ್ತಿಲ್ಲ, ಅಂತು ನೀನು ಕೆಟ್ಟವನು ನಿನ್ನ ಮದುವೆಯಾದರೆ ನನ್ನ ಬಾಳು ನರಕ, ನಾಲಾಯಕ್ಕು, ನಿನ್ನ ಇಷ್ಟ ಪಡುವುದಕ್ಕೆ ಆಗುವುದಿಲ್ಲ ನೀನೆಂದರೆ ನನಗೆ ಇಷ್ಟ ಇಲ್ಲ, ನಿನ್ನ ಮದುವೆಯಾದ್ರು ಒಂದೆ ಆಗದಿದ್ದರು ಒಂದೇ ಅಂತ ಹಣೆಪಟ್ಟಿ ಕಟ್ಟಿಬಿಟ್ಟಿಯಲ್ಲ ಗೆಳತಿ. ನಿಜವಾಗಲು ನಾನು ಅಷ್ಟೊಂದು ಕೆಟ್ಟವನಾಗಿ ಕಂಡುಬಿಟ್ಟನ ನಿನಗೆ, ನೀನು ನನ್ನನ್ನ ಇಷ್ಟಪಡುವುದಿಲ್ಲ ಅನ್ನುವುದಕಿಂತ, ಇದು ನಿನ್ನಲ್ಲಿ ಇಲ್ಲ ಅದನ್ನ ಕಲಿ, ಇದನ್ನ ಮಾಡಬೇಡ ಅಂತ ಹೇಳಿದ್ದರೆ ಅಟ್ ಲೀಷ್ಟ ನನ್ನನ್ನ ನಾನು ಸರಿಮಾಡಕೊಳ್ಳಲಿಕ್ಕೆ ಒಂದು ಅವಕಾಶನಾದರು ಕೊಡಬಹುದಿತ್ತು ಅಲ್ವ, ಅದಕ್ಕೆ ಹೇಳಿದ್ದು ನಾನು ಯಾರಿಗೂ ಇಷ್ಟ ಆಗದಿದ್ದರು ಬೇಜಾರು ಇಲ್ಲ ಬಿಡು ಅಂತ.

ಯಾರು ಇಷ್ಟ ಪಡದಿದ್ದರು ನಮ್ಮವ್ವನಿಗೆ ನಾನೆ ಯುವರಾಜ, ನನ್ನ ತಂಗಿಗೆ ನಾನೆ ಪ್ರಪಂಚ, ನಮ್ಮಣ್ಣರಿಗೆ ನಾನೆ ನೆರಳಾಗಿದ್ದೇನೆ, ಬಿಡು–ಬಿಡು ನಾನು ಹೋದ ತಕ್ಷಣ ನಮ್ಮ ಕಲ್ಯಾಣಿ ಅದೆ ನಮ್ಮ ಮನೆ ಆಕಳು, ನನ್ನ ಮುದ್ದಿನ ಟೈಗರ್ ಇದೆಯಲ್ಲ ಅವರಿಗೆ ಖಂಡಿತವಾಗಿ ನಾನು ಇಷ್ಟ ಆಗತೀನಿ ಬಿಡು, ನಾನು ಊರಿಗೆ ಹೋದರೆ ಅವುಗಳಿಗೆ ಅದು ಹೇಗೆ ಗೊತ್ತಾಗುತ್ತೊ ಗೊತ್ತಿಲ್ಲ ನನ್ನ ಕಂಡರೆ ತುಂಬಾ ಇಷ್ಟ ಪಡುತ್ತವೆ ಅಷ್ಟು ಸಾಕು ನನೆಗೆ. ಇನ್ನು ನಾನು ಕಂಡಂತೆ ನಿನ್ನಲ್ಲಿ ಯಾವ ದೊಷಾನು ಕಾಣಲಿಲ್ಲ ಬಿಡು, ನನಗೆ ನೀನು ಯಾವತ್ತು ಇಷ್ಟ ಆಗುತ್ತೀಯ ಬಿಡು, ಹಾಗಂತ ನಿನ್ನಲ್ಲಿ ವೀಕ್ನೆಸ್ ಇಲ್ಲ ಅಂತ ಹೇಳಲ್ಲ, ಆದರೆ ನನಗೆ ನಿನ್ನ ಪರಿಚಯವಾದ ದಿನದಿಂದಲೂ ನಾನು ಯಾವತ್ತು ಏನೂ ಇಷ್ಟ ಪಡದಿದ್ದವನು ಅದು ಹೇಗೆ ನಿನ್ನ ಇಷ್ಟ ಪಟ್ಟೆನೋ ಗೊತ್ತಿಲ್ಲ, ನಿನ್ನಲ್ಲಿರುವ ಒಳ್ಳೆತನ, ಜಾಣೆ ಬೇರೆ, ಸುಂದರವಾಗಿದ್ದಿಯ ಮುದ್ದು–ಮುದ್ದಾಗಿ ಮಾತಾಡ್ತೀಯ ಅದೆ ಹೆಂಡ ಕುಡಿದವರ ತರಹ, ನೀನು ನಗುತೀಯ ನೋಡು ಅದು ಅದು ಯಾರನ್ನಾ ಬೇಕಾದರು ಇನ್ ಕ್ಲೂಡ್ ನನ್ನನ್ನು ಸೇರಿ ಮಳ್ಳುಮಾಡಿಬಿಡುತ್ತೆ ನೋಡು, ಗೊತ್ತಿದ್ದು ಗೊತ್ತಿಲ್ಲದವರಂತೆ ಟಿಂಗಲ್ ಮಾಡ್ತೀಯಾ ನೋಡು ಅದು ನನಗೆ ತುಂಬಾ ಇಷ್ಟ ಸ್ವಲ್ಪ ಕಷ್ಟಾನು ಕೂಡ, ಹಾಗಾಗಿ ನೀನು ಯಾವತ್ತು ನನಗೆ ಒಳ್ಳೆಯವಳಾಗಿಯೆ ಕಾಣುತ್ತೀಯ, ನನ್ನ ಗುಣಗಳ ಒಂದು ಪಟ್ಟಿಯನ್ನ ಈಗಾಗಲೆ ಕೊಟ್ಟಿದ್ದೇನೆ ಅಫ ಕೊರ್ಸ ನಾನು ಇಷ್ಟ ಆಗುವುದಿಲ್ಲ, ಸರಿ ಬಿಡಿ ದೇವರ ಆಟ ಬಲ್ಲವರಾರು, ನಿನಗೆ ಅದು ಹೇಗೆ ತಿಳಿತೊ ಗೊತ್ತಿಲ ನನೆಗೆ 24–ವಸಂತ ಮುಗಿದು 25 ಕ್ಕೆ ಕಾಲಿಟ್ಟೀದ್ದೇನೆ ಈವತ್ತು ನಮ್ಮವ್ವ ನನ್ನ ಮೂರು ಜನ ಮಕ್ಕಳ್ಳಲ್ಲಿ ನನ್ನ ಕಿರಿ ಮಗನೆ ಸೂಪರ್ ಅಂತ ಹೇಳುತ್ತಾಳೆ, ತಾಯಿ ಹೃದಯ ಅಂತೀಯ ನನಗೆ ಗೊತ್ತಿದ್ದಂತೆ ನನ್ನ ಅಣ್ಣಂದಿರೆ ನನಗಿಂತ ಒಳ್ಳೆಯವರು ನನಗೆ ತಿಳುವಳಿಕೆ ಬಂದಾಗಿನಿಂದ ನೋಡಿದ್ದೇನೆ. ಆದ್ರೆ ನಮ್ಮವ್ವ ನಮಗೆ ಜೀವ ತುಂಬಿ, ಜೀವನ ಕೊಟ್ಟು ಇವತ್ತಿನ ತನಕ ನೋಡಿದ್ದಾಳಲ್ಲಾ ಅವರೆ ಹಾಗೆ ಹೇಳುವಾಗ, ನಾನು ನಿಜವಾಗಲು ನೀನು ಅಂದುಕೊಂಡಷ್ಟು ಕೆಟ್ಟವನಾಗಿರಿಲಿಕ್ಕಿಲ್ಲ ಅನ್ಸುತ್ತೆ.

ಮುಂದುವರಿಯುವುದು..........

ಕವಿ ಮನಸು

## ಭಾರತದ ಭಾಗ್ಯವಿದಾತ ಬಾಬಾಸಾಹೇಬ



ಉದಯಿಸಿದನೋರ್ವ ಅಂಬೇಡ್ಕರ್ ಎಂಬ ಸಂತ
ದಮನಿತ, ಶೋಷಿತರ ಸಮಾನತೆಗೆ ಎದ್ದುನಿಂತ
ಗ್ರಂಥ ಗ್ರಂಥಗಳಲ್ಲೇ ಶ್ರೇಷ್ಠವಾದ ಗ್ರಂಥ
ರಚಿಸಿ ಅರ್ಪಿಸಿದರು ಸಂವಿಧಾನವೆಂಬ ಮಹಾಗ್ರಂಥ

ನವ ಭವ್ಯ ಭಾರತದ ಭವಿಷ್ಯದ ಏಳಿಗೆಗೆ
1950 ಭಾರತೀಯರ ಹೊಸ ಪರ್ವಕೆ ಸುಘಳಿಗೆ
ವಿಶ್ವದ ಬೃಹತ್ ಲಿಖಿತ ಸಂವಿಧಾನವೆಂಬ ಹೆಗ್ಗಳಿಕೆಗೆ
ಸಾಕ್ಷಿಯಾಗಿ, ಧ್ವನಿಯಾಯಿತು ಭಾರತೀಯ ಪ್ರಜೆಗಳಿಗೆ

ಉತ್ಕೃಷ್ಟ ಆಡಳಿತದ ಹೊಣೆಯನ್ನು ಹೊತ್ತಿವೆ
ಕಾರ್ಯಾಂಗ, ಶಾಸಕಾಂಗ, ನ್ಯಾಯಂಗವೆಂಬ ಸ್ಥಂಭಗಳು
ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಬದುಕಲು ರಚಿತವಾಗಿವೆ
395 ವಿಧಿಗಳು, 465 ಅನುಚ್ಛೇದಗಳು, ಸಂವಿಧಾನದ ಒಟ್ಟು 24 ಭಾಗಗಳು

ಸಾರ್ವಭೌಮ, ಸಮಾಜವಾದಿ
ಸರ್ವಧರ್ಮ ಪ್ರತಿಬಿಂಬಿಸಿ
ಸಮಭಾವದ ಪ್ರಜಾಸತ್ತಾತ್ಮಕತೆ ಬೆಳೆಸಲು
ರಾಷ್ಟ್ರದ ಅಖಂಡತೆ, ಏಕತೆಯನ್ನು ರೂಪಿಸಿ
ಗಣರಾಜ್ಯ ರಚಿಸಲು ಸಂವಿಧಾನದ
ಪೀಠಿಕೆಯೇ ಅಡಿಗಲ್ಲು

ಸಮಾನತೆಯ ಹರಿಕಾರ ಪ್ರತಿಪಾದಿಸಿದಂತೆ
ಭ್ರಾತೃತ್ವದ ಧ್ಯೇಯದೊಂದಿಗೆ ಬದುಕೋಣ
ಸಂವಿಧಾನ ಶಿಲ್ಪಿಯ ಆಶಯದಂತೆ
ಅವರ ಮಾರ್ಗದಲ್ಲಿಯೇ ನಡೆಯೋಣ

ಹಲವು ಮಹನೀಯರ ಅವಿರತ ಶ್ರಮದ ಫಲವಾಗಿ
ಲಭಿಸಿದೆ ನಮಗೆ ಗ್ರಂಥದ ಫಲವಾಗಿ
ಸಂವಿಧಾನದ ಪೀಠಿಕೆಯನ್ನು ಓದುವದರ ಮುಖಾಂತರವಾಗಿ
ಗೌರವ ನಮನ ಸಮರ್ಪಿಸೋಣ "ನಮ್ಮ ಸಂವಿಧಾನ"ಕ್ಕಾಗಿ

– ಅಮರೇಶ.ಗೊರಚಿಕನವರ
ಬೆಳಗಾವಿ

## ಭಾರತದ ಭಾಗ್ಯವಿಧಾತ

ಬೆಳೆದಿರಿ ದೂರ ತಳ್ಳಿದವರೆ ಅಪ್ಪಿಕೊಳ್ಳುವಂತೆ
ಇಡೀ ಮನುಕುಲವೇ ಪ್ರೀತಿಯಿಂದ ಒಪ್ಪಿಕೊಳ್ಳುವಂತೆ
ಬೆಳಗಿದಿರಿ ಸದಾ ಕಾಲ ಸೂರ್ಯ ಚಂದ್ರರಂತೆ
ನೆನಪಾಗುತ್ತೀರಿ ನಿತ್ಯ ಹೃದಯ ಬಡಿತದಂತೆ

ಭೂಮಿಯ ಮೇಲೆ ಬಾಬಾಸಾಹೇಬ್ ಜನನ ಭಾರತವೇ ಆಯಿತು ದಿವ್ಯ ಪಾವನ
ಬಾಲ್ಯದಲ್ಲಿ ಪಟ್ಟರು ಬಹಳ ಕಷ್ಟವನ
ಎಂದಿಗೂ ಬಿಡಲಿಲ್ಲ ಅಕ್ಷರ ಕಲಿಯುವ ಆಸೆಯನ



ಬಾಲ್ಯದಲ್ಲಿ ಕಿತ್ತು ತಿನ್ನುವ ಬಡತನ
ಕಾಣಲಿಲ್ಲ ಎಂದಿಗೂ ಬದುಕಿನಲ್ಲಿ ಸಿರಿತನ
ದೊರಕಿತು ಗುರುಗಳ ಮಾರ್ಗದರ್ಶನ
ಪಡೆದರು ತಂದೆ ತಾಯಿಯರ ಪ್ರೀತಿನ

ಹಿಂದೆ ಇಡಲಿಲ್ಲ ತಾವು ಇಟ್ಟ ಹೆಜ್ಜೆನ
ಬದಲಾಯಿಸಿದರು ದೃಷ್ಟಿಯಿಂದ ಭಾರತದ ಸೃಷ್ಟಿನ
ರಚಿಸಿದರು ಸಂವಿಧಾನದ ಕರುಡು ಸಮಿತಿನ
ಮಾಡಿದರು ಅಧ್ಯಕ್ಷರನ್ನಾಗಿ ಸಲಹಾ ಸಮಿತಿ ಇವರನ

ಬರೆದರು ಸಂವಿಧಾನದ ಹಲವಾರು ಕಲಂಗಳನ
ನೀಡಿದರು ಅವಕಾಶ ಪ್ರತಿ ಜಾತಿಗಳಿಗೂ ಸಮಾನ
ಕಾನೂನಿನ ಮುಂದೆ ಎಲ್ಲರೂ ಸಮಾನ
ವಿವಿಧತೆಯಲ್ಲಿ ಏಕತೆಯನ್ನು ಸಾರುವ ಅನುದಿನ

– ಮುತ್ತು.ಯ.ವಡ್ಡರ, ಶಿಕ್ಷಕರು, ಬಾಗಲಕೋಟ

# ನೀವಿನ್ನೂ ಮೋದಿ ಭ್ರಮೆಯಲ್ಲಿದ್ದೀರಾ
## ಜನರನ್ನೇ ಪ್ರಶ್ನಿಸಿದ ಸಿಎಂ ಸಿ.ಎಂ.ಸಿದ್ದರಾಮಯ್ಯ

**ಹುಣಸೂರು:**
ಮೋದಿ ಹುಟ್ಟಿಸಿದ ಭ್ರಮೆಗಳೆಲ್ಲಾ ಬೆತ್ತಲಾಗಿವೆ. ನೀವಿನ್ನೂ ಮೋದಿ ಭ್ರಮೆಯಲ್ಲಿದ್ದೀರಾ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾರ್ವಜನಿಕವಾಗಿ ಪ್ರಶ್ನಿಸಿದರು.



ಮೈಸೂರು ಕೊಡಗು ಲೋಕಸಭಾ ಕ್ಷೇತ್ರದ ಹುಣಸೂರು ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಜನಧ್ವನಿ–2 ಬೃಹತ್ ಜನ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ದೇಶದ ಜನತೆ ಹೇಗೆ ಭ್ರಮೆಗೆ ಒಳಗಾಗಿ ಮೋಸಹೋದರು. ಈ ಲೋಕಸಭಾ ಚುನಾವಣೆ ಭಾರತದ ಭವಿಷ್ಯದ ದೃಷ್ಟಿಯಿಂದ, ಭಾರತದ ಆರ್ಥಿಕತೆ ದೃಷ್ಟಿಯಿಂದ ಬಹಳ ನಿರ್ಣಾಯಕವಾಗಿದೆ ಎಂದರು.

ಕಳೆದ ಹತ್ತು ವರ್ಷ ನೀವು ಬಿಜೆಪಿಗೆ ಓಟು ಹಾಕಿದ್ದು ಏಕೆ? ಯಾವ್ಯಾವ ಕಾರಣಗಳಿಂದ ಓಟು ಹಾಕಿದ್ರಿ ಎನ್ನುವುದನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಿ. ಮೋದಿ ಹೇಳಿದ್ದರಲ್ಲಿ ಒಂದೇ ಒಂದನ್ನಾದರೂ ಈಡೇರಿಸಿದ್ದಾರಾ? ಕಳೆದ ಹತ್ತು ವರ್ಷಗಳಲ್ಲಿ ಭಾರತೀಯರನ್ನು ಭಾವನಾತ್ಮಕವಾಗಿ ಕೆರಳಿಸಿ ವಂಚಿಸಿದ್ದು ಬಿಟ್ಟರೆ ಭಾರತೀಯರ ಬದುಕಿಗೆ ಬೇಕಾದ ಒಂದೇ ಒಂದು ಕೆಲಸವನ್ನಾದರೂ ಮಾಡಿದ್ದಾರಾ ಎನ್ನುವುದನ್ನು ನಿಮ್ಮ ಆತ್ಮಸಾಕ್ಷಿಗೆ ಕೇಳಿಕೊಳ್ಳಿ. ನೀವು ಬಿಜೆಪಿ ಮೇಲಿಟ್ಟಿದ್ದ ನಂಬಿಕೆಗಳಿಗೆ ಮೋಸ ಆಗಿದೆ ತಾನೇ? ನಿಮ್ಮ ನಂಬಿಕೆಗಳಿಗೆ ಮೋಸ ಮಾಡಿ ವಂಚಿಸಿದ ಮೋದಿ ಮತ್ತು ಬಿಜೆಪಿಯ ಸುಳ್ಳುಗಳಿಗೆ ಮತ್ತೆ ಮತ್ತೆ ತಲೆ ಒತ್ತೆ ಇಟ್ಟು ಮರುಳಾಗಬೇಡಿ ಎಂದರು.

ನಾವು ನುಡಿದಂತೆ ನಡೆದಿದ್ದೇವೆ. ನಿಮ್ಮ ನಂಬಿಕೆಗಳಿಗೆ, ನಾವು ಕೊಟ್ಟ ಮಾತಿಗೆ ಗೌರವ ಸಲ್ಲಿಸಿದ್ದೇವೆ. ನಿಮ್ಮ ಓಟಿಗೆ ಘನತೆ ತಂದಿದ್ದೇವೆ. ಪ್ರತೀ ಕುಟುಂಬಕ್ಕೆ ಪ್ರತೀ ತಿಂಗಳು 5 ರಿಂದ 6 ಸಾವಿರ ರೂಪಾಯಿ ಉಳಿತಾಯ ಆಗುವಂತೆ ಸರ್ಕಾರದ ಗ್ಯಾರಂಟಿ ಕಾರ್ಯಕ್ರಮಗಳನ್ನು ಜಾರಿ ಮಾಡಿದ್ದೇವೆ. ನಿಮ್ಮ ಬದುಕಿಗೆ ನೆರವಾಗಿರುವ ಕಾಂಗ್ರೆಸ್ ಸರ್ಕಾರಕ್ಕೆ ಶಕ್ತಿ ತುಂಬಿ. ಭಾರತೀಯರನ್ನು ನಂಬಿಸಿ ಬಕ್ರಾ ಮಾಡುವ ಮೋದಿಯವರನ್ನು, ಬಿಜೆಪಿ ಯನ್ನು ನಂಬಿ ಮತ್ತೆ ಮೋಸ ಹೋಗಬೇಡಿ ಎಂದರು.

ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್, ಸಚಿವರಾದ ಹೆಚ್.ಸಿ.ಮಹದೇವಪ್ಪ, ಕೆ. ವೆಂಕಟೇಶ್, ಸತೀಶ್ ಜಾರಕಿಹೊಳಿ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ತನ್ವೀರ್ ಸೇಠ್, ಆಶ್ರಯ ಸಮಿತಿ ಅಧ್ಯಕ್ಷರಾದ ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ, ಸೇರಿ ಹಲವು ಮುಖಂಡರು ಉಪಸ್ಥಿತರಿದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

- Admissions
- Requirements
- Firm Branding
- Public Notice
- Change of Name

BOOK NOW!

Booking Open for Your Advertisements in Leading Local, State & National News Papers
9482599089 / 9448633038

- Obituary
- Remembrance
- Birthday wish ads
- Events Display &
- Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
Follow for vijayanagara dist. updates

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ. ಡಿ..ವಿ.ಜಿ.

# ಅಂಬೇಡ್ಕರ ಕನಸು ನನಸಾಗುವುದೆಂದು?

■ ಡಾ.ಸುಮಲತ ಬಿ.ಎಂ ಹೊಸಪೇಟೆ

ಏಪ್ರೀಲ್ 14 ಬಂತಂದೆರೆ ನಮಗೆ ನೆನಪಾಗುವುದು ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮದಿನ, ಜನ್ಮದಿನವು ಕೇವಲ ಆಚರಣೆ ಮಾಡುವುದಕ್ಕೆ ಸೀಮಿತವಾಗಬಾರದು. ಅವರ ಚಿಂತನೆಗಳನ್ನು ನಾವು ನಮ್ಮಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ, ಆಚರಣೆಗಳಿಗೆ ಒಂದು ಅರ್ಥ ಸಿಗುತ್ತದೆ. ಸಮಾಜ ವಿಧಿಸಿದ್ದ ಸಂಕೋಲೆಗಳಿಂದ ಮುಕ್ತರಾಗಲು ಅವರು ಪಟ್ಟ ಕಷ್ಟಗಳನ್ನು ಈಗಿನ ಮಕ್ಕಳು ಮತ್ತು ಮಹಿಳೆಯರು ಮನವರಿಕೆ ಮಾಡಿಕೊಳ್ಳಬೇಕು. ಆಚರಣೆಗಳು ಮತ್ತು ಜಯಂತಿಗಳು ಆ ದಿನಕ್ಕೆ ಮಾತ್ರ ಸೀಮಿತವಾಗದೆ ಪ್ರತಿ ದಿನ ಪ್ರತಿಕ್ಷಣ ಅವರ ಚಿಂತನೆಗಳನ್ನು ಮತ್ತು ಸಿದ್ಧಾಂತಗಳು ನಮ್ಮ ಜೀವನದ ಮೆಟ್ಟಿಲುಗಳಾಗಬೇಕು.

ಅಂಬೇಡ್ಕರ್ ಅವರು ಸಮಾನತೆ ಮತ್ತ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನಾಯಕ, ಹೋರಾಟಗಾರರ ಒಡನಾಡಿ ಇವರು. ಸಮಾನತೆಯಿಲ್ಲದ ಸ್ವಾತಂತ್ರ್ಯವು ಶೋಷಿತವಾಗಿರುತ್ತದೆ. ಆದ್ದರಿಂದ ಸ್ವಾತಂತ್ರ್ಯದಷ್ಟೇ ಸಮಾನತೆಯು ಸಾಂವಿಧಾನಿಕವಾದ ಮೂಲಭೂತ ಹಕ್ಕಾಗಬೇಕು ಎಂದು ಅವರು ಪ್ರತಿಪಾದಿಸುತ್ತಲೇ ಬಂದಿದ್ದರು. ಹಾಗೆ ಅವರು ಲಿಂಗತಾರತ್ಯಮದ ಬಗ್ಗೆ ಹೆಚ್ಚು ಜಾಗ್ರತೆ ಮೂಡಿಸಲು ಹೋರಾಡಿದರು. ಮಹಿಳೆಯರಿಗಾಗಿ ಸಮಾಜದಲ್ಲಿ ಸಮಾನತೆ ಕಾಪಾಡಲು ದುಡಿದ ಏಕೈಕ ವ್ಯಕ್ತಿ ಎಂದರೆ ತಪ್ಪಾಗಲಾರದು. ಮಹಿಳೆಯರು ಸಾಮಾಜಿಕವಾಗಿ ಸಬಲಗೊಳ್ಳಬೇಕು. ಹೆಣ್ಣು ಆರ್ಥಿಕವಾಗಿ ಸ್ವತಂತ್ರಳಾಗಿರಬೇಕು ಎಂದು ಅವರಿಗಾಗಿ ಹಿಂದೂ ಕೊಡ್‌ಬಿಲ್ ತಯಾರಿಸಿದರು, ಮಹಿಳೆಯರು ಆರ್ಥಿಕ ಹಕ್ಕುಗಳಿಗಾಗಿ ಮಂಡಿಸಿದ್ದ ಹಿಂದೂಕೊಡ್‌ಬಿಲ್ ಒಪ್ಪಿಗೆ ಸಿಗದಿದ್ದಾಗ ಅಂಬೇಡ್ಕರ್



ಅವರು ಕಾನೂನು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಅವರಿಗೆ ಮಹಿಳೆಯ ಮೇಲೆ ಇದ್ದ ಅಪಾರಗೌರವ ಮತ್ತು ತಾಯ್ತನಕ್ಕೊಂದು ನಿದರ್ಶನ. ಅವರು ಚಿಕ್ಕವರಿರುವಾಗ ತಾಯಿಯ ಮೇಲೆ ಇರುವ ಗೌರವ ಮತ್ತು ಪ್ರೀತಿಗೆ ಇದಕ್ಕೆ ಹೆಚ್ಚು ಕಾರಣವಾಗಿದೆ.

ಮನುಸ್ಮೃತಿಯಲ್ಲಿ ಬಂಧಿಯಾಗಿದ್ದ ಮಹಿಳೆಯರ ಹಕ್ಕುಗಳನ್ನು ಮರುಸ್ಥಾಪಿಸಲು ಅವರು ಶ್ರಮಿಸಿದರು. ಅಂಬೇಡ್ಕರ್ ಅವರನ್ನು ಓದಿಕೊಂಡವವರಿಗೆ ಮಾತ್ರ ಅವರ ನೀಲುವುಗಳು ಅರ್ಥವಾಗುತ್ತವೆ. ಹಿಂದೂಕೊಡ್‌ಬಿಲ್‌ನಲ್ಲಿ ಅವರು ಮಹಿಳಾ ಕಾರ್ಮಿಕರ ಕಲ್ಯಾಣ, ಸಮಾನ ವೇತನ, ತಾಯ್ತನದ ಸೌಲಭ್ಯ (ವೇತನ ಸಹಿತ ಹೆರಿಗೆ ಭತ್ಯೆರಜೆ), ಮಹಿಳಾ ಶಿಕ್ಷಣ, ಎಲ್ಲಾ ಜಾತಿ ಶ್ರೇಣಿಯ ಮಹಿಳೆಯರ ಸಮಸ್ಯೆಗೆ ಪರಿಹಾರ ಹುಡುಕಲು ಪ್ರಯತ್ನಿಸಿದ್ದರು. ಇದಕ್ಕೆ ಎಲ್ಲ ಧರ್ಮದ, ಎಲ್ಲಜಾತಿಯ ಎಲ್ಲ ವರ್ಗದವರು ಋಣಿಯಾಗಿರಬೇಕು.

ಅಂಬೇಡ್ಕರ್ ಅವರು ತಮ್ಮ ಬದುಕು, ಬರಹ, ಭಾಷಣಗಳಲ್ಲಿ ಮಹಿಳೆಯರ ಬಗ್ಗೆ ಹೀಗೆ ಹೇಳಿ ಕೊಂಡಿದ್ದಾರೆ, ಮಹಿಳೆಯರು ಸಾಮಾಜಿಕವಾಗಿ ಸಬಲಗೊಳ್ಳಬೇಕು, ಹೆಣ್ಣು ಆರ್ಥಿಕವಾಗಿ ಸ್ವತಂತ್ರಳಾಗಿ ರಬೇಕು, ಹೆಣ್ಣು ಮಕ್ಕಳ ಮೇಲೆ ಮದುವೆಯನ್ನು ಹೇರಬಾರದು. ಗಂಡನನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿರಬೇಕು. ಆಕೆ ಗಂಡನ ಗುಲಾಮಳಾಗಬಾರದು. ಮಹಿಳೆಗೆ ಅವಳದ್ದೇ ಆದಸ್ವಾತಂತ್ರ್ಯವಿದೆ, ಮಹಿಳೆಗೆ ಮತದಾನದ ಹಕ್ಕು, ಕಾರ್ಮಿಕ ಮಹಿಳೆ ಎಂಟು ಘಂಟೆ ಕೆಲಸ ಇವು ಅವರ ಮಹಿಳಾ ಪರ ಚಿಂತನೆಗಳಾಗಿವೆ.

ಒಂದಿಡೀ ಸಮುದಾಯದ ಪ್ರತಿನಿಧಿಯಾಗಿ ಮುಂಚೂಣಿ ಹೋರಾಟಗಾರರಾಗಿದ್ದ ಅಂಬೇಡ್ಕರ್ ಜನಸಂಪರ್ಕದ ಧಾವಂತ, ಖ್ಯಾತಿಯಿಂದಾಚೆ ತಮ್ಮ ನೇರ ನಡೆನುಡಿಯ ವ್ಯಕ್ತಿತ್ವವನ್ನು ಕಾಯ್ದುಕೊಂಡರು. ಆರೋಗ್ಯ, ವೈಯಕ್ತಿಕ ಸುಖಗಳನ್ನು ಗಮನಿಸದೆ ಸತತ ಸಂಘಟನೆ– ಹೋರಾಟ – ಅಧ್ಯಯನ– ಬರವಣಿಗೆಯಲ್ಲಿ ತೊಡಗಿದಅವರ ಶಕ್ತಿಮೂಲ ಅವರ ಬದ್ಧತೆಯೇ ಆಗಿತ್ತು. ತಮ್ಮ ಜೀವಮಾನದುದ್ದಕ್ಕೂ ಅಂಬೇಡ್ಕರ್ ರಾಜಿ ಆಮಿಷಗಳಿಗೆ ಬಲಿಯಾಗದಂತೆ ನೈತಿಕತೆಯ ಕಾವಲಿಗೆ ನಿಷ್ಠುರತೆಯನ್ನು ಉಳಿಸಿಕೊಂಡು ಬಂದರು. ಆ ಕಾರಣಕ್ಕೆ 'ಸೋಲುವ ಹೆಣ್ಣುಮಕ್ಕಳು ಈ ಗುಣಗಳನ್ನು ಅಳವಡಿಸಿಕೊಳ್ಳುವುದು ಅವಶ್ಯವಾಗಿದೆ. ಅಲ್ಲದೆ ಇವು ಪ್ರಶ್ನಿಸದೇ ಏನನ್ನೂ ಒಪ್ಪಿಕೊಳ್ಳದ ವೈಜ್ಞಾನಿಕ ಮನೋಭಾವವನ್ನೂ ದೂರದೃಷ್ಟಿಯನ್ನೂ ಮುಕ್ತಮನಸ್ಥಿತಿಯನ್ನೂ ಬೆಳೆಸುತ್ತವೆ. ಭಾರತೀಯ ಮಹಿಳಾವಾದ ಮತ್ತು ಅಂಬೇಡ್ಕರ್ ಸರ್ವಸಮಾನತೆ ಸಾರುವ ಸಂವಿಧಾನ ಬಂದು 73 ವರ್ಷಗಳಾದ ನಂತರವೂ ಹಿಂದೂ ದೇವಾಲಯದೊಳಗೆ ಮಹಿಳೆಗೆ ಪ್ರವೇಶ ನೀಡಬೇಕೋ ಬೇಡವೋ ಎಂಬ ಚರ್ಚೆ ನಡೆಯುತ್ತಿದೆ. ಮಹಿಳಾ ಮೀಸಲಾತಿ ಕುರಿತು ದಶಕಗಳಿಂದ ಮಾತು ಕೇಳಿಬರುತ್ತಿದ್ದರೂ ಬೆರಳೆಣಿಕೆಯಷ್ಟು ಮಹಿಳಾ ರಾಜಕಾರಣಿಗಳಿದ್ದಾರೆ. ಕಾನೂನಿನ ಒತ್ತಾಯವಿಲ್ಲದಿದ್ದರೆ ರಾಜಕೀಯ ಪಕ್ಷಗಳಾಲೀ, ಸಮಾಜವಾಗಲೀ ಅವಕಾಶ ವಂಚಿತರಿಗೆ ಯಾವ ಅವಕಾಶವನ್ನೂ ಮೀಸಲಿಡುವುದಿಲ್ಲ ಎನ್ನುವುದು ಮತ್ತೆಮತ್ತೆ ಸಾಬೀತಾಗುತ್ತಿದೆ. ಜಾತಿ ವಿನಾಶವಾದ ಹೊರೆತು ಹೆಣ್ಣಿಗೆ ಪರಿಪೂರ್ಣ ಬಿಡುಗಡೆ ಒದಗಲಾರದೆಂದು ಭಾರತದ ಇವತ್ತಿನ ಸ್ತ್ರೀವಾದಿಗಳು, ಮಹಿಳೆಯರು ಅರ್ಥ ಮಾಡಿಕೊಂಡಿದ್ದು ಅಂಬೇಡ್ಕರ್ ಜಾತಿ ವಿಶ್ಲೇಷಣೆಯನ್ನು ಓದಿದ ಬಳಿಕ. ಜಾತಿವ್ಯವಸ್ಥೆಯ ಉಪ ಉತ್ಪನ್ನವಾದ ಪಿತೃಪ್ರಾಧಾನ್ಯತೆಯ ಆಳ ವಿಸ್ತಾರಗಳನ್ನರಿಯಲು ಸಾಧ್ಯಾಗಿಸಿದ್ದೂ ಅಂಬೇಡ್ಕರವರ ಚಿಂತನೆಗಳೇ.

ಭಾರತದ ನೈಜ ಸ್ವಾತಂತ್ರ್ಯವು ಜಾತಿ ವಿನಾಶದಲ್ಲಿದೆ. ಮಹಿಳಾವಾದವು ಜಾತಿವಿನಾಶ ಚಳವಳಿಯ ನಾಯಕತ್ವ ವಹಿಸುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ವರ್ಗ, ಜಾತಿ ಮತ್ತು ಜೇಂಡರ್ ಚಳವಳಿಗಳು ಒಗ್ಗಟ್ಟಿನಿಂದ ಅಂಬೇಡ್ಕರ್ ಕನಸನ್ನು ನನಸಾಗಿಸುವತ್ತ ನಾವು ಹೆಜ್ಜೆ ಹಾಕಬೇಕಿದೆ. ಮಹಿಳೆ ಸಮಾಜದಲ್ಲಿ ಒಂದು ಸ್ಥಾನ ಕಲ್ಪಿಸಿಕೊಳ್ಳಲು ಅಂಬೇಡ್ಕರ್ ಅವರೆ ಸ್ಪೂರ್ತಿ.

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ಕ್ರೋಧಿ

14–04–2024 – ಭಾನುವಾರ

| | |
|---|---|
| ತಿಥಿ | : ಷಷ್ಠಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಆರಿದ್ರಾ |
| ಯೋಗ | : ಅತಿಗಂಡ |
| ಕರಣ | : ತೈತುಲ |
| ಸೂರ್ಯೋದಯ | : 06:08:11 |
| ಸೂರ್ಯಾಸ್ತ | : 18:46:18 |
| ರಾಹು | : 17:12–18:46 |
| ಯಮಘಂಡ | : 12:27–14:02 |
| ಗುಳಿಕ | : 15:37–17:12 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 13–04–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1578.98 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 112 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.993 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1577.25 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 233 ಕ್ಯುಸೆಕ್ |
| ಸಾಮರ್ಥ್ಯ | 3.279 ಟಿಎಂಸಿ |

# ಚುನಾವಣಾ ವೆಚ್ಚದ ಮೇಲೆ ಹದ್ದಿನ ಕಣ್ಣು

## ಅನುಮಾನಾಸ್ಪದ ವ್ಯವಹಾರಗಳ ಬಗ್ಗೆ ವಿಶೇಷ ನಿಗಾವಹಿಸಿ ಎಂದ ವೆಚ್ಚ ವೀಕ್ಷಕ ಸುರೇಂದ್ರ ಪೌಲ್

■ ಹಂಪಿ ಟೈಮ್ಸ್ ಹೊಸಪೇಟೆ

ಲೋಕಸಭಾ ಚುನಾವಣೆ–2024ರ ಹಿನ್ನೆಲೆಯಲ್ಲಿ ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದಂತೆ ವಿವಿಧ ತಂಡದಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಏಪ್ರೀಲ್ 13ರಂದು ತರಬೇತಿ ನಡೆಯಿತು.

ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಗಳ ವಿವಿಧ ವಿಧಾನಸಭಾ ಕ್ಷೇತ್ರಗಳ ಚುನಾವಣಾ ವೆಚ್ಚ ವೀಕ್ಷಕರಾದ ಸುರೇಂದ್ರ ಪೌಲ್ ಕೆ ಮತ್ತು ಕೆ ಕೃಷ್ಣಮೂರ್ತಿ ಅವರ ಸಮ್ಮುಖದಲ್ಲಿ ವಿಎಸ್‌ಟಿ, ವಿವಿಟಿ, ಎಫ್‌ಎಸ್‌ಟಿ, ಎಸ್‌ಎಸ್‌ಟಿ, ಅಕೌಂಟಿಂಗ್ ತಂಡ ಹಾಗೂ ಎಂಸಿಎಂಸಿ ಸೇರಿದಂತೆ ವಿವಿಧ ತಂಡಗಳಿಗೆ ಚುನಾವಣಾ ವೆಚ್ಚದ ಬಗ್ಗೆ ತರಬೇತಿ ನೀಡಲಾಯಿತು.

ಚುನಾವಣಾ ವೆಚ್ಚ ವೀಕ್ಷಕರಾದ ಸುರೇಂದ್ರ ಪೌಲ್ ಕೆ ಅವರು ಮಾತನಾಡಿ, ಚುನಾವಣೆಯು ಮುಕ್ತ ಹಾಗೂ ನ್ಯಾಯಸಮ್ಮತವಾಗಿ ನಡೆಯುವ ನಿಟ್ಟಿನಲ್ಲಿ ಅಭ್ಯರ್ಥಿಗಳು



ಮಾಡುವ ಖರ್ಚು ವೆಚ್ಚಗಳ ಬಗ್ಗೆ ಹಾಗೂ ಚುನಾವಣಾ ಅವಧಿಯಲ್ಲಿ ಅನುಮಾನಾಸ್ಪದ ವ್ಯವಹಾರಗಳ ಬಗ್ಗೆ ವಿಶೇಷ ನಿಗಾವಹಿಸಬೇಕು ಎಂದು ತಿಳಿಸಿದರು.

ಮತ್ತೋರ್ವ ಚುನಾವಣಾ ವೆಚ್ಚ ವೀಕ್ಷಕರಾದ ಕೆ ಕೃಷ್ಣಮೂರ್ತಿ ಅವರು ಮಾತನಾಡಿ, ಲೋಕಸಭಾ ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಖರ್ಚು ವೆಚ್ಚದ ಬಗ್ಗೆ ಅವರ ಶ್ಯಾಡೋ ರಿಜಿಸ್ಟರ್ ಮತ್ತು ಪೋಲ್ಡರ್ ಆಫ್ ಎವಿಡನ್ಸ್‌ಗಳನ್ನು ಸೂಕ್ತವಾಗಿ ನಿರ್ವಹಿಸಲು ಚುನಾವಣಾ ಖರ್ಚು ವೆಚ್ಚಗಳ ನಿರ್ವಹಣಾ ನೋಡಲ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಲೋಕಸಭಾ ಚುನಾವಣೆಯ ಬಳ್ಳಾರಿ ಜಿಲ್ಲಾ ವೆಚ್ಚ ಉಸ್ತುವಾರಿ ಕೋಶದ ಹರೀಶ್ ಅವರು ತರಬೇತಿಯಲ್ಲಿ ಮಾತನಾಡಿ, ಚುನಾವಣೆ ಹಿನ್ನೆಲೆಯಲ್ಲಿ ಅಭ್ಯರ್ಥಿಗಳು ನಡೆಸುವ ಸಾರ್ವಜನಿಕ ಸಭೆಗಳು, ರ್‍ಯಾಲಿಗಳು, ನೀಡುವ ಜಾಹೀರಾತುಗಳು, ಬಳಸುವ ಪೋಸ್ಟರಗಳು, ಬ್ಯಾನರಗಳು, ವಾಹನಗಳು ಸೇರಿದಂತೆ ಚುನಾವಣಾ ಪ್ರಚಾರಕ್ಕಾಗಿ ಅಭ್ಯರ್ಥಿಯು ಕಾನೂನುಬದ್ಧವಾಗಿ ಮಾತ್ರ ಖರ್ಚು ಮಾಡಲು ಅನುಮತಿಸಲಾಗಿರುತ್ತದೆ. ಸಂಶಯಾಸ್ಪದ ವಾಹಿವಾಟು ಕಂಡುಬಂದಲ್ಲಿ ಕಟ್ಟುನಿಟ್ಟಿನ ಮೇಲ್ವಿಚಾರಣೆ ನಡೆಸಲು ಆಯಾ ತಂಡದಲ್ಲಿನ ಅಧಿಕಾರಿಗಳು ವಿಶೇಷ ನಿಗಾವಹಿಸಬೇಕು ಎಂದು ತಿಳಿಸಿದರು.

ಲೋಕಸಭಾ ಚುನಾವಣೆಯ ಚುನಾವಣಾ ವೆಚ್ಚದ ಬಳ್ಳಾರಿಯ ನೋಡಲ್ ಅಧಿಕಾರಿಗಳಾದ ನಾಗರಾಜು ಹಾಗು ವಿಜಯನಗರ ಜಿಲ್ಲೆಯ ಲೋಕಸಭಾ ಚುನಾವಣೆಯ ಚುನಾವಣಾ ವೆಚ್ಚದ ವಿಜಯನಗರ ಜಿಲ್ಲಾ ನೋಡಲ್ ಅಧಿಕಾರಿಗಳಾದ ಸಿ.ಜಿ.ಶ್ರೀನಿವಾಸ ಅವರು ಉಪಸ್ಥಿತರಿದ್ದರು.

ಕಾರ್ಯನಿರ್ವಹಣೆಯ ಪರಿಶೀಲನೆ: ಚುನಾವಣಾ ವೆಚ್ಚ ವೀಕ್ಷಕರಾದ ಸುರೇಂದ್ರ ಪೌಲ್ ಕೆ ಹಾಗೂ ಕೆ ಕೃಷ್ಣಮೂರ್ತಿ ಅವರು ತರಬೇತಿ ಬಳಿಕ ಜಿಲ್ಲಾಡಳಿತ ಭವನದಲ್ಲಿನ ಜಿಲ್ಲಾ ದೂರು ನಿರ್ವಹಣಾ ಕೇಂದ್ರಕ್ಕೆ ಭೇಟಿ ನೀಡಿ ಮಾಹಿತಿ ಪಡೆದರು. ವಿವಿಧ ಸಮಿತಿಗಳ ಕಾರ್ಯನಿರ್ವಹಣೆಯ ಬಗ್ಗೆ ಪರಿಶೀಲಿಸಿದರು.

ಪಿಯುಸಿಯಲ್ಲಿ ಸಾಧನೆಗೈದ ನಿಮ್ಮ ನೆಚ್ಚಿನ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಬೇಕೇ?, ಪ್ರವೇಶ ಹಾಗೂ ಅಭಿನಂದನೆ ಜಾಹೀರಾತು ಬುಕ್ಕಿಂಗ್‌ಗಾಗಿ ಕೂಡಲೇ ಸಂಪರ್ಕಿಸಿ: ಹಂಪಿ ಟೈಮ್ಸ್ : 9448633038

ನಿಮ್ಮ ಹೊಸ ಮತ್ತು ಉತ್ಪನ್ನಗಳನ್ನು ಹೊಸ ಗ್ರಾಹಕರಿಗೆ ಪರಿಚಯಿಸಲು ಮತ್ತು ಹೊಸ ವಿಸ್ತರಿಸಲು ಬಯಸಿದ್ದೀರಾ? ಇಂದೇ ಸಂಪರ್ಕಿಸಿ : 9448633038

ವಿಜಯನಗರ ಜಿಲ್ಲೆಯ ಉದ್ದಿಮೆದಾರರಿಗೆ ಸುವರ್ಣಾವಕಾಶ!
HAMPI TIMES VIJAYANAGARA
ಪ್ರತಿ ಭಾನುವಾರದ ಜಾಹೀರಾತು
ಜಾಹೀರಾತು ಚಿಕ್ಕದಾದರೂ ಬ್ರ್ಯಾಂಡಿಂಗ್ ಜಗದಗಲ

SPARES & SERVICES
PORTABLE COMPRESSORS For Portable Diesel-driven Air Compressors ranging from 160 cfm - 1350 cfm, For Electrical Air Compressors ranging from 45kW - 75kW motors
Scan to Deatils
S M TRADERS & SERVICES
M:9686663125 - 9686663132 - 9686413132
Hampi Road, Hosapete-583201 Vijayanagara Dist.

ರೈತರಿಂದ ನೇರ ಮಾರಾಟ
ಸಾವಯವ ಪದ್ಧತಿಯಲ್ಲಿ ಬೆಳೆದ ಗುಣಮಟ್ಟದ ತೆಂಗಿನಕಾಯಿ, ಬಾಳೆಹಣ್ಣು, ತಾಜಾ ನುಗ್ಗೇಕಾಯಿ ಮತ್ತು ನುಗ್ಗೆ ಸೊಪ್ಪಿಗಾಗಿ ಸಂಪರ್ಕಿಸಿ
Organic Coconut, Banana, Moringa Oleifera Available in Wholesale Best Price
M:98458 65204
Opp: Baldota Park, M.J.Nagara, Hosapete-583201 Vijayanagara Dist.

VIVĒKASRĒYĀLĀPA
VEENA INSTRUMENTAL VOCAL - KARNATIC AND FILM MUSIC Classes
contact for more information
M:91082 26938, 90368 65666
Near Honda Showroom, Hosapete-583201

ಮದುವೆ, ಗೃಹಪ್ರವೇಶ, ಶುಭ ಸಮಾರಂಭ, ಸಭೆ, ವಿವಿಧ ಧಾರ್ಮಿಕ ಕಾರ್ಯಕ್ರಮಗಳಿಗಾಗಿ ಭೇಟಿ ನೀಡಿ
ನೂತನವಾಗಿ ನವೀಕರಣಗೊಂಡ
ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪ
ಪಟೇಲನಗರ, ಹೊಸಪೇಟೆ, ವಿಜಯನಗರ ಜಿಲ್ಲೆ
ಸ್ವಾತಿ ಸೌಂಡ್ಸ್ & ಡೆಕೋರೇಟರ್ಸ್
M:9448261804, 9742130982

ॐ OM ENTERPRISES
Disposible Items Production & Wholesale
Available: Paper Tea Cup - Water Cup - Juice Cup - Bowl & Plate Etc.
M:94487 17137, 83109 88292
Chitrakeri, Hosapete-583201, Vijayanagara Dist.

V N Royal Garden Function Hall
Hall is a Perfect suit for a meeting, Your Son & Daughters marriage, your child's birthday party, wedding reception or a business seminar.
This a best party place located in hosapet, Vijayanagara Dist.
WE ARE OPEN for Every Function
M:9980136034, 9880701217
Behind Meeralam Talkies, Hosapete-583201 Vijayanagara Dist.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA